ದೆಹಲಿ ಕರ್ನಾಟಕ ಸಂಘದ

# ಅಭಿಮತ


ಅಕ್ಟೋಬರ್ 2019
ಬೆಲೆ ರೂ. 1

ಬೇಂದ್ರೆ ರಾಷ್ಟ್ರೀಯ ವಿಚಾರ ಸಂಕಿರಣ






ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ : 21.09.2019ರಂದು ಬೇಂದ್ರೆ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಮಧ್ಯಪ್ರದೇಶದ ಇಂದಿರಾಗಾಂಧಿ ರಾಷ್ಟ್ರೀಯ ಆದಿವಾಸಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ತೇಜಸ್ವಿ ಕಟ್ಟೀಮನಿ ಅವರನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮತ್ತು ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅವರು ಅಭಿನಂದಿಸಿದರು.



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ : 21.09.2019ರಂದು ಬೇಂದ್ರೆ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಿದ ಹಿರಿಯ ರಾಜಕಾರಣಿ ಶ್ರೀ ಬಿ.ಎಲ್. ಸಂತೋಷ್ ಅವರನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ. ಅವರು ಅಭಿನಂದಿಸಿದರು.

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು
ಸಂತೋಷ್ ಕುಮಾರ್ ಉಪಾಧ್ಯಾಯ
ಎಸ್. ಕುಮಾರ್
ಚಂದ್ರಶೇಖರ ಜೋಳದರಾಶಿ

ಸಂಪುಟ 30
ಸಂಚಿಕೆ 1
ಅಕ್ಟೋಬರ್ 2019

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

# ಸಂಪಾದಕೀಯ

## ಗಾಂಧಿವಾದದ ಪ್ರಸ್ತುತತೆ

ಮಹಾತ್ಮ ಗಾಂಧಿಯವರ ನೂರೈವತ್ತನೇ ಜನ್ಮ ದಿನಾಚರಣೆಯನ್ನು ಈ ಬಾರಿ ಎಲ್ಲೆಡೆ ಸಂಭ್ರಮದಿಂದ ಆಚರಿಸಲಾಗಿದೆ. ಬ್ರಿಟೀಷರ ದಬ್ಬಾಳಿಕೆಯಿಂದ ಭಾರತವನ್ನು ಮುಕ್ತಗೊಳಿಸಿ ಭಾರತೀಯರಿಗೆ ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಯಶಸ್ವಿಯಾದ ಮಹಾತ್ಮನನ್ನು ವಿಶೇಷವಾಗಿ ಇಂದು ನಾವು ಸ್ಮರಿಸಿಕೊಳ್ಳುತ್ತಿದ್ದೇವೆ.

ಗಾಂಧಿ ಚಿಂತನೆಯಡಿ ಸಾಗಿ ಬಂದ ಭಾರತ ಇಂದು ರಾಷ್ಟ್ರಪಿತನ 'ರಾಷ್ಟ್ರ ನಿರ್ಮಾಣ'ದ ಕನಸನ್ನು ಸಾಕಾರಗೊಳಿಸಿದೆಯೇ ಎಂಬುದನ್ನು ನಾವು ಪರಿಶೀಲಿಸಬೇಕು. ಹೀಗೆ ಯೋಚಿಸುವಾಗ ಗಾಂಧಿವಾದ ಇಂದು ಎಷ್ಟರಮಟ್ಟಿಗೆ ಪ್ರಸ್ತುತ ಎಂಬ ಪ್ರಶ್ನೆಯೂ ಏಳುತ್ತದೆ. ಮುಖ್ಯವಾಗಿ ಭರತಖಂಡ ಸಂತರ, ದಾರ್ಶನಿಕರ, ಮಹಾಕವಿಗಳ ನೆಲೆಬೀಡಾಗಿತ್ತು. ಇಂತಹ ನೆಲದಲ್ಲಿ ಗಾಂಧೀಜಿ ನಮ್ಮೆಲ್ಲರ ನಾಯಕ ಹೇಗಾದರು ಎಂಬ ಅರಿವು ನಮಗೆ ಆಗಬೇಕಾಗಿದೆ.

ಗುಜರಾತಿನ ಪೋರಬಂದರಿನ ವ್ಯಾಪಾರಿ ಕುಟುಂಬದಲ್ಲಿ ಜನಿಸಿದ ಮೋಹನ್‌ದಾಸ ಕರಮಚಂದ ಗಾಂಧಿ ಎಂಬ ವ್ಯಕ್ತಿ ಸಮಸ್ತ ಭಾರತೀಯರ ಪ್ರತಿನಿಧಿ ಎನಿಸಲು ಮುಖ್ಯ ಕಾರಣ ಭಾರತೀಯರು ನಂಬಿಕೊಂಡಿದ್ದ ಧಾರ್ಮಿಕತೆಯ ಕುರಿತು ಗಾಂಧಿ ಹೊಂದಿದ್ದ ನಿಲುವು ಮತ್ತು ಹೋರಾಟದ ಹಾದಿಯಲ್ಲಿ ಯಶಸ್ವಿಯಾಗಲು ಅವರು ಬಳಸಿದ ವಿಭಿನ್ನ ಅಸ್ತ್ರ ಎಂಬುದನ್ನು ನಾವು ಮನಗಾಣಬೇಕು.

ಮೊದಲನೆಯದು ಗಾಂಧೀಜಿ ಈ ನೆಲದ ಧಾರ್ಮಿಕ ಆಚರಣೆಗಳನ್ನು ಶ್ರದ್ಧೆಯಿಂದ ಪಾಲಿಸುತ್ತಿದ್ದರು. ಆದರೆ ಅನ್ಯ ಧರ್ಮದ ಬಗೆಗೆ ವಿಶೇಷ ಗೌರವ ಹೊಂದಿದ್ದರು. ಅವರ ಧರ್ಮ ಸಹಿಷ್ಣುತೆ ಬಹು ಸಂಸ್ಕೃತಿಯ ಭಾರತೀಯರಿಗೆ ಇಷ್ಟವಾಗಿತ್ತು. ಎರಡನೆಯದು ಹೋರಾಟದ ಹಾದಿಯಲ್ಲಿ ಅವರು ಬಳಸಿದ 'ಅಹಿಂಸೆ' ಎಂಬ ಅಸ್ತ್ರ. ಇದು ಭಾರತೀಯರಿಗೆ ಮಾತ್ರವಲ್ಲ ವಿಶ್ವದ ಹಲವು ದೇಶಗಳು ಮಾನವ ಘನತೆಯನ್ನು ಮರಳಿ ಪಡೆಯಲು ನೆರವಾಯಿತು. ಈ ಮೂಲಕ ಅವರು ದಲಿತರು, ಮಹಿಳೆಯರು ಮತ್ತು ಗ್ರಾಮೀಣ ಜನರ ಪರವಾಗಿ ತಳೆದ ನಿಲುವು ಮತ್ತು ಹೋರಾಟಗಳು ಈಗ ಐತಿಹಾಸಿಕ.

ಗಾಂಧಿವಾದದ ಪ್ರಮುಖ ಎರಡು ಆಶಯಗಳು 'ಸ್ವರಾಜ್' ಮತ್ತು 'ಸ್ವದೇಶಿ' ಆಗಿದೆ. ಇವೆರಡೂ ಇಂದು ಪ್ರಸ್ತುತವಾಗಿದೆಯೇ ಎಂಬ ಪ್ರಶ್ನೆ ನಮ್ಮ ಮುಂದಿದೆ. ಭಾರತ ಇಂದು ರಾಜಕೀಯವಾಗಿ ಬಲಿಷ್ಠವಾಗಿರುವುದರಿಂದ 'ಸ್ವರಾಜ್' ಎಂಬ ಗಾಂಧಿ ಆಶಯದ ಗುರಿಯನ್ನು ಸಾಧಿಸಿದೆ ಎನ್ನಬಹುದು. ಆದರೆ 'ಸ್ವದೇಶಿ' ಎಂಬ ಅವರ ಪರಿಕಲ್ಪನೆ ಇಂದು ಹೆಚ್ಚು ಪ್ರಸ್ತುತವಾಗಿಲ್ಲ. ಭಾರತದ ಆರ್ಥಿಕ ಮಹತ್ವಾಕಾಂಕ್ಷೆಯಿಂದ 'ಸ್ವದೇಶಿ' ಆಶಯದ ಗುರಿ ತಲುಪಲು ನಮಗೆ ಸಾಧ್ಯವಾಗಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕು.

'ಸರ್ವೋದಯ' ಗಾಂಧಿವಾದದ ಇನ್ನೊಂದು ಪ್ರಮುಖ ಅಂಶ. ಸಮಾಜದ ಎಲ್ಲ ವರ್ಗಗಳ ಕಲ್ಯಾಣವೇ ಇದರ ಮುಖ್ಯ ಆಶಯ. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂದು ಬಹುಸಂಖ್ಯಾತರಿಗೆ, ಮುಖ್ಯವಾಗಿ ರಾಜಕೀಯ ಪ್ರಾತಿನಿಧ್ಯ ದೊರೆಯುತ್ತಿದೆ. ಇದರಿಂದ ಕೆಲವು ಸಣ್ಣಪುಟ್ಟ ಜಾತಿವರ್ಗಗಳು ಮತ್ತು ಅಲ್ಪಸಂಖ್ಯಾತ ಭಾಷೆಗಳು ಮೂಲೆಗುಂಪಾಗುತ್ತಿವೆ. ಈ ಹಿನ್ನೆಲೆಯಲ್ಲಿ ಗಾಂಧೀಜಿ ಅವರ ಸರ್ವೋದಯದ ಕನಸು ದೂರದ ಮಾತೇ ಆಗಿ ಉಳಿದಿದೆ. ಇದನ್ನು ಸಾಧ್ಯವಾಗಿಸಲು ನಾವು ಮುಂದಿನ ದಿನಗಳಲ್ಲಿ ಗಾಂಧಿ ತತ್ವಚಿಂತನೆಗಳ ಬೆಳಕಲ್ಲಿ ಇನ್ನಷ್ಟು ದೂರ ಸಾಗಬೇಕಿದೆ.

*ಡಾ. ಅವನೀಂದ್ರನಾಥ್ ರಾವ್*

**ಮುಖಪುಟ ಚಿತ್ರ**

ದಿನಾಂಕ : 29.09.2019 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ 'ಮಹಿಷ ಮರ್ಧಿನಿ' ಯಕ್ಷಗಾನದಲ್ಲಿ ಶ್ರೀದೇವಿಯಾಗಿ ಪ್ರದರ್ಶನ ನೀಡಿದ ಕಲಾವಿದೆಯ ಒಂದು ವಿಶೇಷ ಭಂಗಿ. ಈ ಭಾವಚಿತ್ರಗಳನ್ನು ಸೆರೆಹಿಡಿದವರು ಸಂಘದ ಸಹ ವ್ಯವಸ್ಥಾಪಕ ಶ್ರೀ ದೇವಯ್ಯ ಎಂ.ಇ.

*ಸಂಪಾದಕ*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 ಸಂಚಿಕೆ 1
ಅಕ್ಟೋಬರ್ 2019, ಬೆಲೆ ರೂ. 1

**ನಮ್ಮನಮ್ಮೊಳಗೆ**

# ಅಭಿಮತಕ್ಕೆ ಮೂವತ್ತು

ಅಭಿಮತಕ್ಕೆ ಈಗ ಮೂವತ್ತರ ಸಂಭ್ರಮ. ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆಯಾಗಿ, ದೆಹಲಿ ಕನ್ನಡಿಗರ (ಮತ್ತು ಉತ್ತರ ಭಾರತದ ಕನ್ನಡಿಗರ) ಸೃಜನಶೀಲ ಅಭಿವ್ಯಕ್ತಿಗೆ ವೇದಿಕೆಯಾಗಿ ಅದು ಕಳೆದ ಈ ಮೂರು ದಶಕಗಳಲ್ಲಿ ತನ್ನದೇ ಆದ ರೀತಿಯಲ್ಲಿ ಕನ್ನಡ ಭಾಷೆಗೆ ಮತ್ತು ಸಂಸ್ಕೃತಿಗೆ ತನ್ನ ಕೊಡುಗೆಯನ್ನು ನೀಡಿದೆ. ಅಭಿಮತದ ಪ್ರಾರಂಭದ ದಿನಗಳಲ್ಲಿ ಅದರ ಸಂಪಾದಕನಾಗಿ ಕಾರ್ಯ ನಿರ್ವಹಿಸುವ ಭಾಗ್ಯ ನನ್ನದಾಗಿತ್ತು. ಇದನ್ನು ಈಗ ಒಂದು ರೀತಿಯಲ್ಲಿ 'ಭಾಗ್ಯ'ವೆಂದೇ ಪರಿಗಣಿಸಬೇಕು. 1990ರ ಅಕ್ಟೋಬರ್ 2ನೇ ತಾರೀಖು, ಅಂದಿನ ಗಾಂಧೀ ಜಯಂತಿಯ ದಿನ ಅಭಿಮತದ ಮೊದಲ ಸಂಚಿಕೆ ಹೊರ ತರುವುದರೊಂದಿಗೆ ನನ್ನ ಸಂಪಾದನೆಯ ಕಾರ್ಯಕಾಲ ಪ್ರಾರಂಭವಾಗಿ ಅದು ಮುಂದಿನ ಹದಿನಾಲ್ಕು ವರುಷಗಳ ಕಾಲ ಮುನ್ನಡೆಯಿತು.

ಈ ಎಲ್ಲ ಕಾಲಗಳಲ್ಲಿ ಈ ತಿಂಗಳ ಪತ್ರಿಕೆಯನ್ನು ಒಲೈಸಿ, ಪರಿಷ್ಕರಿಸಿ, ಅದಕ್ಕೆ ಉಡುಗೆ ತೊಡಿಸಿ, ಉಣ ಬಡಿಸಿ. . . .ವನ್ನೆಲ್ಲ ವಾಗಾತಿಗಳನ್ನು ಅದಕ್ಕೆ ಮಾಡಿದವರ ಸಂಖ್ಯೆ ತುಂಬಾ ದೊಡ್ಡದು. ಅದರಲ್ಲಿ ಪ್ರಮುಖವಾಗಿ ಬರುವವರು ಆಗಿನ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಎನ್.ಪಿ. ಭಟ್ಟರು. ಅವರ ಬೆಂಬಿಡದ ಬೆಂಬಲ ಮತ್ತು ಉತ್ಸಾಹವಿಲ್ಲದಿದ್ದರೆ ಅಭಿಮತ ತನ್ನ ಮೊದಲ ಪುಟ್ಟ ಹೆಜ್ಜೆಗಳನ್ನು ಇರಿಸಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕೆ ಬೇಕಾದ ತಾಂತ್ರಿಕ ಮತ್ತು ಇತರ ಸಹಾಯವನ್ನು ತಮ್ಮ ಎಂದಿನ ಉತ್ಸಾಹದಲ್ಲಿ ನೀಡಿದ ಆಗಿನ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ವಿ. ಗೋಪಿನಾಥ್ ಅವರನ್ನೂ ಸಹ ಈ ಪುಟ್ಟ ಪತ್ರಿಕೆಯ ಅಭ್ಯುದಯದಲ್ಲಿ ನೆನೆಸಿಕೊಳ್ಳಬೇಕು. ಈ ನಮ್ಮ ಅಭಿಮತ ಕಂಪ್ಯೂಟರಿಕರಣದತ್ತ ಸಾಗಲು ನೆರವಾದವರು ಗೋಪಿನಾಥ್ ಅವರು.

ನಂತರದ ಕಾಲದಲ್ಲಿ ಅಭಿಮತವನ್ನು ಆಡಿಸಿ ಬೆಳೆಸಿದವರ ಪಟ್ಟಿ ತುಂಬಾ ದೊಡ್ಡದು. ಮೊದಲ ಹತ್ತು ವರುಷಗಳಲ್ಲಿದ್ದ ಶ್ರೀ ಜಿ.ಆರ್. ರಂಗಸ್ವಾಮಯ್ಯ, ಶ್ರೀ ಚೆನ್ನು ಎಸ್. ಮಠದ್, ಶ್ರೀ ಟಿ.ಎಸ್. ಸತ್ಯನಾಥ, ಶ್ರೀ ಡಿ.ವಿ.ಎಸ್. ರಾವ್, ಶ್ರೀ ಚಂದ್ರಶೇಖರ. . . .ಈ ಪಟ್ಟಿ ತುಂಬಾ ದೊಡ್ಡದು. ನನ್ನ ನೆನಪಿನ ಗಣಿಯಲ್ಲಿ ಹಲವಾರು ಹೆಸರುಗಳು ಎಲ್ಲೋ ಇವೆ. ಅದನ್ನೆಲ್ಲ ಬಗೆದು ತೆಗೆದು ಮುಂದಿನ ಲೇಖನವೊಂದರಲ್ಲಿ ಅದನ್ನು ಮತ್ತೊಮ್ಮೆ ಪಡಿಮಾಡಿಸುವ ಕರ್ತವ್ಯ ಈಗ ನನ್ನದಾಗಿದೆ.

ಅಭಿಮತಕ್ಕೆ ಹದಿನೈದು ತುಂಬುತ್ತಿದ್ದ ಹಾಗೆ ನಾನು ಅದರ ಸಂಪಾದಕತ್ವದಿಂದ ಮತ್ತು ಸಂಪಾದಕ ಮಂಡಳಿಗೆ ವಿದಾಯ ಹೇಳಿದ ನಂತರ ಅದರ ಉಡುಗೆ-ತೊಡಿಗೆ ಮತ್ತು ಅದರ ಅಂತರ್ಯದ ಜವಾಬ್ದಾರಿಯನ್ನು ಹೊತ್ತು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀಮತಿ ಉಷಾ ಭರತಾದ್ರಿ, ಶ್ರೀಮತಿ ರೇಣುಕಾ ನಿಡಗುಂದಿ, ಶ್ರೀ ಬಾಲಕೃಷ್ಣ ನಾಯ್ಕ್ ಮತ್ತು ಈಗಿನ ಸಂಪಾದಕ ಡಾ. ಅವನೀಂದ್ರನಾಥ್ ರಾವ್ ಅವರನ್ನು ನಾವು ಈ ಸಂದರ್ಭದಲ್ಲಿ ನೆನೆಯಬೇಕು ಮತ್ತು ಈ ಪತ್ರಿಕೆಯ ಬೆಂಗಾವಲಿಗೆ ನಿಂತ ಶ್ರೀ ಕೃಷ್ಣ ಭಟ್ಟ, ಡಾ. ಪುರುಷೋತ್ತಮ ಬಿಳಿಮಲೆ ಮತ್ತು ಕೆಲ ಕಾಲದ ಹಿಂದೆ ನಮ್ಮೆನ್ನೆಲ್ಲ ಬಿಟ್ಟು ಅಗಲಿದ ಶ್ರೀ ಕೆ.ಆರ್. ನಾಗರಾಜ, ಶ್ರೀ ಐ. ರಾಮಮೋಹನ ರಾವ್, ಶ್ರೀ ಎ.ಪಿ. ಕುಮಟಾಕರ. . .ಹೀಗೆ ಕೃತಜ್ಞತೆಯ 'ಗಾಳಿಪಟ' ಅಭಿಮತದ ಈ ಬದುಕಿನ ಪ್ರಪಂಚದಲ್ಲಿ ನಿರಂತರವಾಗಿ ಹಾರಾಡುತ್ತಿರುತ್ತದೆ.

ಮೂವತ್ತು ವರ್ಷಗಳ ಹಿಂದ ನಾನು ಅಭಿಮತದ ಚುಕ್ಕಾಣಿ ಹಿಡಿದಾಗ ಅದು ತನ್ನ ಜೀವನದ ಕ್ಷಣಗಳಲ್ಲಿ ಎತ್ತ ಸಾಗುವುದೆಂಬುದರ ಬಗ್ಗೆ ನನಗೆ ಯಾವ ಅರಿವೂ ಇರಲಿಲ್ಲ. ಆಧರೆ, ಈ ಮೂರು ದಶಕಗಳಲ್ಲಿ ನಾವೆಲ್ಲ ಮತ್ತೆ ಮತ್ತೆ ದೆಹಲಿ ಕರ್ನಾಟಕ ಸಂಘದತ್ತ, ಅಭಿಮತದತ್ತ ಮುಖಮಾಡಿ ಬರುತ್ತಿರುವುದು ನನಗೆ ಇನ್ನೂ ಅತ್ಯಂತ ವಿಶಿಷ್ಟವಾದ ವಿಷಯವಲ್ಲದೆ, ಒಂದು ಬಗೆಯ ವಿಶಿಷ್ಟ ಅನುಭವವೂ ಸರಿ. ಆದರೆ, ಅಭಿಮತ ಬರೀ ಸಂಘದ ಮುಖಪತ್ರಿಕೆಯಾಗಿ ಅದರ ಮುಖವಾಣಿಯಾಗಿ ಪರಿವರ್ತಿತವಾಗಬಾರದು. ಸಂಘದ ಅದರಲ್ಲೂ ಮುಖ್ಯವಾಗಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಈ ಹೊರನಾಡಿನ ಜಗತ್ತಿನಲ್ಲಿ ಪಸರಿಸುವ ಜೀವಸೆಲೆಯಾಗಬೇಕು.

ಈಗ ಹೊರನಾಡು, ಒಳನಾಡು ಎಂಬ ಪ್ರಭೇಧಗಳು ತೀರಿ ಹೋಗುವಷ್ಟರ ಮಟ್ಟಿಗೆ ತಂತ್ರಜ್ಞಾನದ ಜಾಲ ಪಸರಿಸಿದೆ. ಅದು ಸಂವಹನ ಮಾಧ್ಯಮಗಳಿಗೂ ಅನ್ವಯಿಸುತ್ತದೆ. ಅಭಿಮತವೂ ಇದರಿಂದ ಹೊರತಲ್ಲ. ಆದರೂ ದೆಹಲಿ ಕರ್ನಾಟಕ ಸಂಘದ ಭಾಗವಾದ ಅಭಿಮತಕ್ಕೆ ದೆಹಲಿಯ ಮತ್ತು ಉತ್ತರ ಭಾರತದ ಕನ್ನಡಿಗರ ಬದುಕನ್ನು ಕಾಲಕಾಲಕ್ಕೂ ಸೃಜನಶೀಲ ರೀತಿಯಲ್ಲಿ ಹಿಡಿದಿಡುವ ಜವಾಬ್ದಾರಿಯಿದೆ. ಅದನ್ನು ಪೂರೈಸುತ್ತ ಅಭಿಮತ ಮುಂದಡಿಯಿಡಬೇಕು.

ಈ ಪುಟ್ಟ ಪತ್ರಿಕೆಗೆ ಈಗ ಪ್ರೌಢಾವಸ್ಥೆಯ ಸಂಭ್ರಮ. ಅದರ ಮೂವತ್ತು ವಸಂತಗಳನ್ನು ನಾವು ಮೆಲುಕು ಹಾಕಿಕೊಳ್ಳುವಂತಹ ಕಾರ್ಯಕ್ರಮವೊಂದನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಂಡು ಅದರ ಭಾಗವಾಗಿದ್ದವರನ್ನೆಲ್ಲ ನೆನೆಸಿಕೊಳ್ಳಬೇಕಾಗಿದೆ. ಈ 'ಅಭಿಮತ'ವೆಂಬ ನಮ್ಮೆಲ್ಲರ ಕನಸು ಇನ್ನೂ ನೂರು ವರುಷಗಳಿಗೂ ಮೀರಿ ಮುಂದೆ ಸಾಗಲಿ ಎಂದು ನಾವೆಲ್ಲ ಹಾರೈಸೋಣ.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕನ್ನಡಿಗರಿಗೆ ಇರುವುದು ಎರಡು ಸುಂದರವಾದ ಸಂಸ್ಥೆಗಳು. ಇವು ನಮ್ಮ ಕನ್ನಡಿಗರ ಎರಡು ಕಣ್ಣುಗಳು ಇದ್ದಾಗೆ. ಕರ್ನಾಟಕ ಸಂಘ ಕಲೆ, ಸಾಹಿತ್ಯ, ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಕನ್ನಡವನ್ನು ಉಳಿಸುವ ಕೆಲಸ ಮಾಡುತ್ತಾ ಬರುತ್ತಿದೆ. ಕನ್ನಡ ಶಾಲೆಯು ವಿದ್ಯಾದಾನ ಮಾಡುತ್ತ ದೆಹಲಿಯಲ್ಲಿ ಕನ್ನಡ ಕಲಿಸುವ ಕಾರ್ಯವನ್ನು ಮಾಡುತ್ತಿದೆ. ಇದೇ ಸೆಪ್ಟೆಂಬರ್ ತಿಂಗಳಿಗೆ ಕನ್ನಡ ಶಾಲೆಯ ಪ್ರಸ್ತುತ ಕಾರ್ಯಕಾರಿ ಸಮಿತಿಯ ಅವಧಿಯು ಮುಕ್ತಾಯವಾಗಿದೆ. ನಾವೀಗ ಹೊಸ ಕಾರ್ಯಕಾರಿ ಸಮಿತಿಯನ್ನು ಆರಿಸಬೇಕಾಗಿದೆ.

ನಮ್ಮಲ್ಲಿ ಭಿನ್ನಾಭಿಪ್ರಾಯಗಳು ಇವೆ. ಆದರೆ ದಯವಿಟ್ಟು ನಮ್ಮ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಬಿಟ್ಟು ಶಾಲೆಯನ್ನು ಉಳಿಸುವ ಪ್ರಯತ್ನವನ್ನು ಮಾಡೋಣ. ನಿಜವಾಗಿ ನಮ್ಮ ಶಾಲೆಯಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ನಡೆಯಬೇಕಾದ ಕೆಲಸಗಳು. ನಾವು ಸಂಘದಿಂದ ಈಗಾಗಲೇ ಸ್ಮಾರ್ಟ್ ಕ್ಲಾಸ್ ಅಳವಡಿಕೆಯನ್ನು ಮಾಡಿದ್ದೇವೆ. ಶಾಲೆಯಲ್ಲಿ ಇನ್ನೂ ಬೇಕಾದಷ್ಟು ಕೆಲಸಗಳಿವೆ.

1. 10 ಮತ್ತು 12ನೇ ತರಗತಿ ಮಕ್ಕಳಿಗೆ ವಿಶೇಷವಾಗಿ ಬೋಧನೆ
2. ಕನ್ನಡದ ಎಲ್ಲಾ ಮಕ್ಕಳಿಗೆ ಉಚಿತ ಶಿಕ್ಷಣ
3. ಕನ್ನಡದ ಎಲ್ಲಾ ಮಕ್ಕಳಿಗೂ ಉಚಿತ ಸಾರಿಗೆ ವ್ಯವಸ್ಥೆ
4. ಕರ್ನಾಟಕ ಸರ್ಕಾರದಿಂದ ಬಿಡುಗಡೆಯಾಗದೆ ಉಳಿದಿರುವ ರೂ ಒಂದು ಕೋಟಿ ಬಿಡುಗಡೆ ಮಾಡಿಸುವುದು. ಈ ಕೆಲಸಗಳನ್ನು ಪೂರ್ಣಗೊಳಿಸಬೇಕಾಗಿದೆ.

ಮೊನ್ನೆ ಮಾನ್ಯ ಉಪಮುಖ್ಯಮಂತ್ರಿಗಳಾದ ಡಾ. ಸಿ.ಎನ್. ಅಶ್ವಥ್‌ನಾರಾಯಣ ಅವರನ್ನು ಭೇಟಿ ಮಾಡಿ, ಕನ್ನಡ ಶಾಲೆಗೆ ಈ ಹಣದ ಜೊತೆಗೆ ಇನ್ನೂ ಹೆಚ್ಚಿನ ಹಣ ಬಿಡುಗಡೆ ಮಾಡಬೇಕು ಎಂದು ಕೇಳಿದ್ದೇವೆ ಇದಕ್ಕೆ ಒಪ್ಪಿಗೆ ನೀಡಿದ್ದಾರೆ.

ಕರ್ನಾಟಕದಲ್ಲಿ ಸಂತ್ರಸ್ತರ ಮಳೆಯಿಂದ ಹಾನಿಯಾದವರಿಗೆ ದೆಹಲಿ ಕರ್ನಾಟಕ ಸಂಘ ರೂ. ಐದು ಲಕ್ಷಗಳನ್ನು ನೀಡುತ್ತಿದೆ. ಬೇರೆ ಬೇರೆ ಸಂಘ ಸಂಸ್ಥೆಗಳು ಮತ್ತು ಸದಸ್ಯರು ನೀಡಿದ ಹಣವನ್ನು ಅಭಿಮತದಲ್ಲಿ ಪ್ರಕಟಿಸಲಾಗಿದೆ. ಇದಕ್ಕೆ ಸಹಕರಿಸಿದ ಎಲ್ಲರಿಗೂ ಅನಂತ ಧನ್ಯವಾದಗಳು.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಪ್ರತಿ ಭಾನುವಾರ ಕಾರ್ಯಕ್ರಮಗಳು, ಸಂಗೀತ ತರಬೇತಿ, ನೃತ್ಯ ತರಬೇತಿ ಹಾಗೂ ಕ್ರಿಕೆಟ್ ಮತ್ತು ಆಟೋಟಸ್ಪರ್ಧೆಗಳು, ವಿದ್ಯಾರ್ಥಿವೇತನ ವಿತರಣೆ ನಡೆಯಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

### ಅಕ್ಟೋಬರ್ 11, 2019 ಶುಕ್ರವಾರ
### ಸಂಜೆ : 6.00 ಗಂಟೆಗೆ

ದೆಹಲಿ ಕರ್ನಾಟಕ ಸಂಘ ಹಾಗೂ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ, ನವದೆಹಲಿ ಸಹಯೋಗದಲ್ಲಿ
**ಕಲೆ ಮತ್ತು ಸಂಗೀತ ನಮನ** (ಖ್ಯಾತ ಚಿತ್ರಕಲಾವಿದ ದಿ. ಭೀಮರಾವ್ ಮುರಗೋಡ ಅವರ ಸ್ಮರಣಾರ್ಥ) ಹಾಗೂ **ಭೀಮರಾವ್ ಮುರಗೋಡ ಅವರು ರಚಿಸಿದ ಚಿತ್ರಕಲಾ ಪ್ರದರ್ಶನ**

### ಅಕ್ಟೋಬರ್ 13, 2019 ಭಾನುವಾರ
### ಅಪರಾಹ್ನ : 3.30 ರಿಂದ

ದೆಹಲಿ ಕರ್ನಾಟಕ ಸಂಘ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು, ಮಂಗಳೂರು ಸಹಯೋಗದೊಂದಿಗೆ
**ಅಂತರ್‌ರಾಜ್ಯ ಮಟ್ಟದ ಚುಟುಕು ಕವನ/ ದೇಶಪ್ರೇಮ/ ಪರಿಸರಪ್ರೇಮ ಯೋಗ ಜಾಗೃತಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ**

### ಅಕ್ಟೋಬರ್ 19, 2019 ಶನಿವಾರ
### ಮಧ್ಯಾಹ್ನ : 2.30 ಗಂಟೆಗೆ

ದೆಹಲಿ ಕರ್ನಾಟಕ ಸಂಘ ಮತ್ತು ಗೋಕರ್ಣ ಮಂಡಳ, ನವದೆಹಲಿ ಸಂಯುಕ್ತಾಶ್ರಯದಲ್ಲಿ
**ಗೋಕರ್ಣ ಮಂಡಳದ 40ನೇ ವಾರ್ಷಿಕೋತ್ಸವ**
ಹವ್ಯಕ ಗಣ್ಯವ್ಯಕ್ತಿಗಳಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಗೋಕರ್ಣವಾಣಿ ಸ್ಮರಣಸಂಚಿಕೆ ಬಿಡುಗಡೆ, ಗೋಕರ್ಣ ಮಂಡಳಿಯ ಸದಸ್ಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, **ಯಕ್ಷಗಾನ ಸುಧನ್ವಾರ್ಜುನ ಕಾಳಗ** ಕಾಶ್ಯಪ ಪ್ರತಿಷ್ಠಾನ ಮಹಿಳಾ ಯಕ್ಷಗಾನ ಮಂಡಳಿ ಗಡಿಗೆಹೊಳೆ, ಶಿರಸಿ ಕಲಾವಿದರಿಂದ

ನವೆಂಬರ್ 1–ರಾಜ್ಯೋತ್ಸವ ಅಂಗವಾಗಿ ಸಂಘದಲ್ಲಿ **ಧ್ವಜಾರೋಹಣ**.

ನವೆಂಬರ್ 3 –ಸಾಫಲ್ಯ ತಂಡದ ಮೂಗು ಸುರೇಶ್ ಅವರಿಂದ **ನಾಟಕ ಪ್ರದರ್ಶನ**

ನವೆಂಬರ್ 10–ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ ಮತ್ತು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ **ರಾಜ್ಯೋತ್ಸವ ಆಚರಣೆ**.

ನವೆಂಬರ್ 12, 13, 14, 15 ಶ್ರೀ ಟಿ.ಎಸ್. ರಮೇಶ್ ಮತ್ತು ತಂಡದಿಂದ ಸಂಗೀತ ತರಬೇತಿ ಮತ್ತು ನವೆಂಬರ್ 16ರಂದು **ಸಂಗೀತ ತರಬೇತಿ** ಪಡೆದ ಕಲಾವಿದರಿಂದ ಕಾರ್ಯಕ್ರಮ ಹಾಗೂ **ವಿದ್ಯಾರ್ಥಿ ವೇತನ ವಿತರಣೆ**.

ನವೆಂಬರ್ 24–**ಆಹಾರ ಮೇಳ**.

ನವೆಂಬರ್ 26 ರಿಂದ 29 **ನೃತ್ಯ ತರಬೇತಿ** ಶಿಬಿರ ನವೆಂಬರ್ 30ಕ್ಕೆ ತರಬೇತಿ ಪಡೆದವರಿಂದ ಕಾರ್ಯಕ್ರಮ, **ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ**.

## ವಿದ್ಯಾರ್ಥಿ ವೇತನ 2019–20

ದೆಹಲಿ ಕರ್ನಾಟಕ ಸಂಘದಿಂದ 2019–20ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.
ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು 31 ಅಕ್ಟೋಬರ್ 2019ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.
ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
ಅರ್ಜಿಗಳನ್ನು ದೆಹಲಿ ಕರ್ನಾಟಕ ಸಂಘದ ವೆಬ್‌ಸೈಟ್‌ನ http://delhikarnatakasangha.com/Scholarship_form.pdf ಮೂಲಕವೂ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಪ್ರಧಾನ ಕಾರ್ಯದರ್ಶಿ

# ದ.ರಾ. ಬೇಂದ್ರೆ ರಾಷ್ಟ್ರೀಯ ವಿಚಾರ ಸಂಕಿರಣ



ಬಂಡಾಯೋತ್ತರ ಸಂದರ್ಭದಲ್ಲಿ ಬೇಂದ್ರೆ ಕಾವ್ಯದ ಕುರಿತು ಹೆಚ್ಚಿನ ಅಧ್ಯಯನ ನಡೆದಿಲ್ಲ. ದೇಶೀ ಭಾಷಾ ಶೈಲಿಗೆ ಮಾರ್ಗ ಭಾಷಾ ಶೈಲಿ ಬೇಂದ್ರೆ ಕಾವ್ಯಕ್ಕೆ ಗಂಭೀರತ್ವ ಒದಗಿಸಿದೆ. ಬೇಂದ್ರೆಯವರ ಕಾವ್ಯದಲ್ಲಿ ಜನಪದಿಯ ಅಂಶಗಳಿಗೆ ಒತ್ತು ನೀಡಲಾಗಿದೆ. ಆದರೆ ಬೇಂದ್ರೆಯವರ ಕಾವ್ಯದ ಮೇಲೆ ಭಾರತೀಯ ಪರಂಪರೆಗಳು ಗಾಢವಾದ ಪ್ರಭಾವ ಬೀರಿವೆ. ಕನ್ನಡ ಮತ್ತು ಮರಾಠಿ ಭಕ್ತಿಪರಂಪರೆಗಳು ಬೇಂದ್ರೆ ಕಾವ್ಯಕ್ಕೆ ಭವ್ಯತೆ ತಂದುಕೊಟ್ಟಿವೆ. ಸಂಸ್ಕೃತ ಸಾಹಿತ್ಯದ ತೀವ್ರ ಪ್ರಭಾವಕ್ಕೂ ಅವರು ಒಳಗಾಗಿದ್ದರು. ಬೇಂದ್ರೆಯವರು ಭಾಷೆಯ ಸೂಕ್ಷ್ಮತೆಯನ್ನು ತಿಳಿದುಕೊಂಡಿದ್ದರು. ಅವರ ಭಾಷೆ ಪಿಸುಮಾತಾಗುತ್ತಿತ್ತು. ಒಮ್ಮೊಮ್ಮೆ ಘರ್ಜಿಸುತ್ತಿತ್ತು ಎಂದು ಖ್ಯಾತಕವಿ ಪ್ರೊ. ಎಚ್.ಎಸ್. ಶಿವಪ್ರಕಾಶ ಹೇಳಿದರು.

ದಿನಾಂಕ 21-9-2019ರಂದು ನವದೆಹಲಿಯ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ, ಮಧ್ಯಪ್ರದೇಶದ ಇಂದಿರಾಗಾಂಧಿ ರಾಷ್ಟ್ರೀಯ ಆದಿವಾಸಿ ವಿಶ್ವವಿದ್ಯಾಲಯ, ಅಮರಕಂಟಕ ಹಾಗೂ ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಏರ್ಪಡಿಸಿದ್ದ 'ದ.ರಾ.ಬೇಂದ್ರೆ : ಆಧುನಿಕ ಭಾರತೀಯ ಕಾವ್ಯ ಪರಂಪರೆ' ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಆಶಯ ನುಡಿಗಳನ್ನಾಡುತ್ತ, ಬೇಂದ್ರೆಯವರ ಕಾವ್ಯದಲ್ಲಿ ಜಾಗೃತಿ, ನಿದ್ದೆ, ಸ್ವಪ್ನವೂ ಕಾಣುತ್ತದೆ. ಪಾಶ್ಚಾತ್ಯ ಕವಿಗಳಲ್ಲಿ ಕಾಣಿಸಿಕೊಳ್ಳುವ ಮುಂಚೆಯೇ ಅತಿವಾಸ್ತವತೆ ಬೇಂದ್ರೆಯವರ ಕಾವ್ಯದಲ್ಲಿ ಕಂಡದ್ದು ವಿಸ್ಮಯಕಾರಿ. ಆದರೆ ಬೇಂದ್ರೆ ಕಾವ್ಯ ಅರವಿಂದರ ಪ್ರಭಾವಕ್ಕೆ ಒಳಗಾದ ಮೇಲೆ ತನ್ನ ಮೊನಚು, ಸೂಕ್ಷ್ಮತೆ ಕಳೆದುಕೊಂಡಿತು. ಸ್ವಾತಂತ್ರ್ಯೋತ್ತರ ಭಾರತದ ಒಡಕುಗಳನ್ನು, ಬಿರುಕುಗಳನ್ನು ಬೇಂದ್ರೆ ಕಾವ್ಯ ಅಭಿವ್ಯಕ್ತಿಸಲಿಲ್ಲ. ಕನ್ನಡ ಕಾವ್ಯಭಾಷೆ ತನ್ನ ಸೂಕ್ಷ್ಮತೆ ಕಳೆದುಕೊಳ್ಳುವ ಸಂದರ್ಭದಲ್ಲಿ ಬೇಂದ್ರೆಯವರ ಕಾವ್ಯದ ಮರುಮೌಲೀಕರಣ ನಡೆದಿರುವುದು ಸ್ವಾಗತಾರ್ಹ ಎಂದು ಪ್ರೊ. ಶಿವಪ್ರಕಾಶ ಹೇಳಿದರು.



ಪ್ರೊ.ಎಚ್.ಎಸ್. ಶಿವಪ್ರಕಾಶ

ಮಧ್ಯಪ್ರದೇಶದ ಅಮರಕಂಟಕದ ಇಂದಿರಾ ಗಾಂಧಿ ರಾಷ್ಟ್ರೀಯ ಆದಿವಾಸಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತೇಜಸ್ವಿ ಕಟ್ಟೀಮನಿಯವರು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತ ಬೇಂದ್ರೆಯವರ ಭಾರತದ ಸರ್ವಶ್ರೇಷ್ಠ ಕವಿಗಳಲ್ಲಿ ಪ್ರಮುಖರು. ಅವರ ಕಾವ್ಯದ ಸಮಕಾಲೀನ ಪ್ರಸ್ತುತತೆ ಬೆರಗುಗೊಳಿಸುವಂಥದ್ದು, ಅವರ ಕಾವ್ಯ ಭೂತ, ವರ್ತಮಾನ ಮತ್ತು ಭವಿಷ್ಯದ ಸವಾಲುಗಳನ್ನು ತನ್ನ ಒಡಲಲ್ಲಿಟ್ಟುಕೊಂಡಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ವಿಚಾರ ಸಂಕಿರಣದ ಸಂಯೋಜಕರಾದ ಬಸವರಾಜ ಡೋಣೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಬೇಂದ್ರೆ ಟ್ರಸ್ಟ್ ಸದಸ್ಯ ಕಾರ್ಯದರ್ಶಿ ಮಂಜುಳಾ ಯಲಿಗಾರ,



ಪ್ರೊ.ತೇಜಸ್ವಿ ಕಟ್ಟೀಮನಿ

ಟ್ರಸ್ಟ್ ವ್ಯವಸ್ಥಾಪಕ ಪ್ರಕಾಶ ಬಾಳಿಕಾಯಿ, ಅನಂತ ದೇಶಪಾಂಡೆ, ಕುಮಾರ ಮರಡೂರ ಮುಂತಾದವರು ಉಪಸ್ಥಿತರಿದ್ದರು.

ನಂತರ ವಿವಿಧ ಗೋಷ್ಠಿಗಳು, ಅನಂತ ದೇಶಪಾಂಡೆ ಅವರಿಂದ ಬೇಂದ್ರೆ ದರ್ಶನ, ಕುಮಾರ ಮರಡೂರ ಅವರಿಂದ ಬೇಂದ್ರೆ ಗೀತ ಗಾಯನ, ಉಡುಪಿಯ ಶಾರದಾ ರೆಸಿಡೆನ್ಸಿಯಲ್ ಸ್ಕೂಲ್ ವಿದ್ಯಾರ್ಥಿಗಳಿಂದ ಸುಗಮ ಸಂಗೀತ, ನೃತ್ಯರೂಪಕ ಹಾಗೂ ಯಕ್ಷಗಾನ ಕಾರ್ಯಕ್ರಮ ಜರಗಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದಕ್ಕೆ ಸಹಕಾರ ನೀಡಿತ್ತು. ಜಂಟಿ ಕಾರ್ಯದರ್ಶಿ ಪೂಜಾ ರಾವ್ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರೂಪಿಸಿದರು

ಆರಂಭದಲ್ಲಿ ಎಸ್. ಕುಮಾರ ಹಾಗೂ ನೇತ್ರಾವತಿ ಅವರು ನಾಡಗೀತೆಯನ್ನು ಪ್ರಸ್ತುತಪಡಿಸಿದರು.

ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ ಡಾ. ಡಿ.ಎಂ. ಹಿರೇಮಠರು ಸ್ವಾಗತಿಸಿದರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ ರಾವ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

# ಸಾಂಸ್ಕೃತಿಕ ಕಾರ್ಯಕ್ರಮಗಳ ಚಿತ್ರಗಳು



ಕುಮಾರ ಮರಡೂರ



ಕು. ಅನನ್ಯ ನಾಗರಾಜ



ಅನಂತ ದೇಶಪಾಂಡೆ









# 'ಲಯ' ಬೇಂದ್ರೆ ಕಾವ್ಯದ ಪ್ರಧಾನ ಅಂಶ

## -ಡಾ. ಬಸವರಾಜ ಕಲ್ಗುಡಿ

ಆಧುನಿಕ ಕಾವ್ಯ ಭಾಷೆಯಲ್ಲಿ 'ಲಯ'ವನ್ನು ಪ್ರಧಾನವಾಗಿ ತಂದ ಕವಿ ದ.ರಾ. ಬೇಂದ್ರೆ ಎಂದು ವಿಮರ್ಶಕ ಡಾ. ಬಸವರಾಜ ಕಲ್ಗುಡಿ ಅಭಿಪ್ರಾಯ ಪಟ್ಟರು. ಅವರು ದಿನಾಂಕ 21.09.2019ರಂದು ನಡೆದ ಬೇಂದ್ರೆ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ದ.ರಾ. ಬೇಂದ್ರೆ : ಆಧುನಿಕ ಭಾರತೀಯ ಕಾವ್ಯ ಪರಂಪರೆ' ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ಭಾರತೀಯ ಭಕ್ತಿ ಕಾವ್ಯಪರಂಪರೆ ಮತ್ತು ಬೇಂದ್ರೆ' ವಿಷಯದ ಕುರಿತು ಮಾತನಾಡುತ್ತಿದ್ದರು.

ಬೇಂದ್ರೆಯವರನ್ನು ಬಿಟ್ಟರೆ ಕಂಬಾರರ ಕಾವ್ಯದಲ್ಲಿ ಈ ಬಗೆಯ ಲಯಗಾರಿಕೆಯನ್ನು ಕಾಣಬಹುದು ಎಂದವರು ವಿವರಿಸಿದರು. ಕುವೆಂಪು ಮತ್ತು ಬೇಂದ್ರೆ ಇಬ್ಬರೂ 'ಸೌಂದರ್ಯ'ದ ಬಗೆಗೆ ಕವಿತೆಗಳನ್ನು ಬರೆದಿದ್ದಾರೆ. ಕುವೆಂಪು ಅವರದ್ದು ದರ್ಶನದ ಭಾಷೆ. ಬೇಂದ್ರೆಯವರ ಮೇಲೆ ಭಾರತೀಯ ದರ್ಶನ, ಭಕ್ತಿ ಪಂಥ ಮತ್ತು ಅರವಿಂದರ ತತ್ವಗಳ ಪ್ರಭಾವವಿದೆ. ಕವಿ ಮಧುರಚಂದ್ರ ಮತ್ತು ಬೇಂದ್ರೆ ಗೆಳೆಯರಾಗಿದ್ದರು ಎಂದು ಡಾ. ಕಲ್ಗುಡಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು.

ಎರಡು ದಿನಗಳಲ್ಲಿ ನಡೆದ ಆರು ವಿಚಾರಗೋಷ್ಠಿ ಮತ್ತು ಸಂವಾದಗಳಲ್ಲಿ ಅನೇಕ ವಿದ್ವಾಂಸರು ಪಾಲ್ಗೊಂಡು ವಿಚಾರಗಳನ್ನು ಮಂಡಿಸಿದರು. ಶ್ರೀ ಆನಂದ ಝುಂಜರವಾಡ ಇವರು 'ಅರವಿಂದರ ತತ್ವಶಾಸ್ತ್ರ ಚಿಂತನೆ ಮತ್ತು ಬೇಂದ್ರೆ' ಹಾಗೂ ಡಾ. ಗುರುಪಾದ ಮರಿಗುದ್ದಿ ಅವರು 'ಭಾರತೀಯ ದರ್ಶನಗಳು ಮತ್ತು ದ.ರಾ. ಬೇಂದ್ರೆ' ಕುರಿತು ಮಾತನಾಡಿದರು.

ಎರಡನೇ ಗೋಷ್ಠಿಯಲ್ಲಿ ಡಾ. ಬಾಳಾಸಾಹೇಬ ಲೋಕಾಪುರ ಅವರು 'ಬೇಂದ್ರೆ ಕಾವ್ಯದಲ್ಲಿ ತಾಯಿ', ಡಾ. ವಿಕ್ರಮ ವಿಸಾಜಿ 'ಬೇಂದ್ರೆ ಕಾವ್ಯ ಮೀಮಾಂಸೆ' ಮತ್ತು ಡಾ. ತಾರಿಣಿ ಶುಭದಾಯಿನಿ ಅವರು 'ಬೇಂದ್ರೆ ಕಾವ್ಯ: ಸ್ತ್ರೀವಾದಿ ಓದು' ಕುರಿತು ಮಾತನಾಡಿದರು.

ಮೂರನೇ ಗೋಷ್ಠಿಯಲ್ಲಿ ಡಾ. ಜಿ. ಕೃಷ್ಣಪ್ಪ ಅವರು 'ಬೇಂದ್ರೆ ಕಾವ್ಯದಲ್ಲಿ ನಿಸರ್ಗ ಮತ್ತು ಸ್ತ್ರೀ' ಕುರಿತು ವಿಶೇಷ ಉಪನ್ಯಾಸ ನೀಡಿದರು.

ನಾಲ್ಕನೇ ಗೋಷ್ಠಿಯಲ್ಲಿ ಡಾ. ಟಿ.ಎಂ. ಭಾಸ್ಕರ್ ಅವರು 'ಭಾರತೀಯ ರಸಮೀಮಾಂಸೆ ಮತ್ತು ಬೇಂದ್ರೆ', ಡಾ. ಸೋಮಶೇಖರ ಅಪ್ಪಗೆರೆ 'ಬೇಂದ್ರೆ ವಿಚಾರ ಸಾಹಿತ್ಯ' ಮತ್ತು ಡಾ. ವೆಂಕಟಗಿರಿ ದಳವಾಯಿ ಅವರು 'ಭಾರತೀಯ ಜಾನಪದ ಸಾಹಿತ್ಯ ಮತ್ತು ಬೇಂದ್ರೆ' ಕುರಿತು ಪ್ರಬಂಧ ಮಂಡಿಸಿದರು.

ಐದನೇ ಗೋಷ್ಠಿಯಲ್ಲಿ ಡಾ. ಶಾಂತಾ ಇಮ್ರಾಪೂರ ಅವರು 'ಬೇಂದ್ರೆ ಕಾವ್ಯದ ವೈಚಾರಿಕ ನೆಲೆಗಳು', ಡಾ. ಎಂ.ಎಸ್. ಆಶಾದೇವಿ 'ಬೇಂದ್ರೆ ಕಾವ್ಯದಲ್ಲಿ ಪರಿಸರ ಪ್ರಜ್ಞೆ' ಮತ್ತು ಡಾ. ಶಿವಾನಂದ ಕೆಳಗಿನಮನಿ ಅವರು 'ಬೇಂದ್ರೆ ನಾಟಕಗಳ ವಸ್ತು ಸ್ವರೂಪ' ಕುರಿತು ವಿಚಾರ ಮಂಡಿಸಿದರು.

ಕೊನೆಯಲ್ಲಿ ನಡೆದ ಸಂವಾದ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿ ಪ್ರೊ. ಬಸವರಾಜ ಡೋಣೂರ ಅವರು ಮಾತನಾಡಿದರು. ದ.ರಾ. ಬೇಂದ್ರೆ ಕಾವ್ಯ : ಭೂತ, ವರ್ತಮಾನ ಮತ್ತು ಭವಿಷ್ಯ ಎಂಬ ಈ ಸಂವಾದದಲ್ಲಿ ವಿದ್ವಾಂಸರುಗಳಾದ ಶ್ರೀ ಅರವಿಂದ ಕುಲಕರ್ಣಿ, ಡಾ. ರಾಜಣ್ಣ ತಗ್ಗಿ, ಡಾ. ರಮೇಶ ಅರೋಲಿ, ಡಾ. ಸಂಗಮನಾಥ ಲೋಕಾಪೂರ, ಡಾ. ಬಸು ಬೇವಿನಗಿಡದ, ಡಾ. ರಾಜಶೇಖರ ಹತಗುಂದಿ ಮತ್ತು ಶ್ರೀ ಶಂಕರ ಹಲಗತ್ತಿ ಭಾಗವಹಿಸಿದರು.



ಡಾ. ಬಸವರಾಜ ಕಲ್ಗುಡಿ



ಡಾ. ಶಾಂತಾ ಇಮ್ರಾಪೂರ



ಡಾ. ಬಾಳಾಸಾಹೇಬ ಲೋಕಾಪುರ



ಡಾ. ಎಂ.ಎಸ್. ಆಶಾದೇವಿ



ಡಾ. ಬಸವರಾಜ ಡೋಣೂರ



ಡಾ. ಜಿ. ಕೃಷ್ಣಪ್ಪ



ಡಾ. ತಾರಿಣಿ ಶುಭದಾಯಿನಿ

# ಬೇಂದ್ರೆ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ




ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಮನು ಬಳಿಗಾರ್ ಸಮಾರೋಪ ಭಾಷಣ ಮಾಡಿದರು

ಬೇಂದ್ರೆ ಕನ್ನಡದ ಮಹತ್ವದ ಕವಿ. ಅವರ ಕಾವ್ಯದಲ್ಲಿ ಸಾರ್ವಕಾಲಿಕ ಸತ್ಯಗಳಿವೆ, ಬೇಂದ್ರೆ ಜನಮಾಸದ ಕವಿ; ಜನ ಸಾಮಾನ್ಯರ ಕವಿ. ಬೇಂದ್ರೆಯವರ ಸಾಹಿತ್ಯ ಚರ್ಚೆ ಹೆಚ್ಚು ಹೆಚ್ಚು ಆಗಬೇಕಿದೆ. ಮರಾಠಿಯಲ್ಲಿ ಶಿವಾಜಿ ಒಬ್ಬರ ಬಗ್ಗೆಯೇ ಒಂಭತ್ತು ಕೋಟಿ ಪುಟಗಳಷ್ಟು ಸಾಹಿತ್ಯ ಬಂದಿದೆ. ಈ ಕೆಲಸ ಕನ್ನಡದಲ್ಲಿ ಆಗಿರುವುದಿಲ್ಲ. ಈ ಕೆಲಸ ಆಗಬೇಕಿದೆ ಎಂದು ಹಿರಿಯ ರಾಜಕಾರಣಿ ಬಿ.ಎಲ್. ಸಂತೋಷ ಅವರು ಹೇಳಿದರು.

ದಿನಾಂಕ 22-09-2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ, ಇಂದಿರಾ ಗಾಂಧಿ ರಾಷ್ಟ್ರೀಯ ಆದಿವಾಸಿ ವಿಶ್ವವಿದ್ಯಾಲಯ ಅಮರಕಂಟಕ, ಮಧ್ಯಪ್ರದೇಶ ಮತ್ತು ದೆಹಲಿ ಕರ್ನಾಟಕ ಸಂಘ, ನವದೆಹಲಿ ಇವುಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಬೇಂದ್ರೆ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡುತ್ತಿದ್ದರು. ಅವರು ಬೇಂದ್ರೆಯವರ ಸಾಹಿತ್ಯವನ್ನು ಇತರ ಭಾಷೆಗಳಾದ ಬಂಗಾಲಿ, ತೆಲುಗು, ಮರಾಠಿ, ಇಂಗ್ಲೀಷ್, ಮಲಯಾಳಂ ಮುಂತಾದ ಭಾಷೆಗಳಿಗೆ ಅನುವಾದಿಸಿದಲ್ಲಿ ಬಹುಸಂಖ್ಯಾತರಿಗೆ ಬೇಂದ್ರೆ ಸಾಹಿತ್ಯ ಓದಲು ಸಾಧ್ಯವಾಗುವುದು ಎಂದರು.

ಮಧ್ಯಪ್ರದೇಶದ ಇಂದಿರಾ ಗಾಂಧಿ ಆದಿವಾಸಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತೇಜಸ್ವಿ ಕಟ್ಟೀಮನಿ ಅವರು ಅತಿಥಿಗಳಾಗಿ ಭಾಗವಹಿಸಿ ಬೇಂದ್ರೆಯವರಂಥ ಪ್ರತಿಭಾವಂತ ಕವಿಯ ಸಾಹಿತ್ಯ ಬೇರೆ ಬೇರೆ ಭಾಷೆಗಳಿಗೆ ಭಾಷಾಂತರವಾಗಬೇಕು, ಬೇಂದ್ರೆ ಕಾವ್ಯ, ನಾಟಕ ಹಾಗೂ ಅವರ ವ್ಯಕ್ತಿತ್ವದ ಕುರಿತು ಪರಿಚಯಾತ್ಮಕ ಗ್ರಂಥಗಳು ರಚನೆಗೊಳ್ಳಬೇಕು ಎಂದು ಹೇಳಿದರು.

ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮನು ಬಳಿಗಾರ ಅವರು ಸಮಾರೋಪ ನುಡಿಗಳನ್ನಾಡುತ್ತ ಸಮಕಾಲೀನ ಸಮಸ್ಯೆಗಳಿಗೆ ಬೇಂದ್ರೆ ಸಾಹಿತ್ಯದಲ್ಲಿ ಉತ್ತರವಿದೆ. ಅವರ ಸಾಹಿತ್ಯ ಎಲ್ಲಾ ಕಾಲಕ್ಕೂ ಅನ್ವಯಿಸುವಂಥದ್ದು. ಬೇಂದ್ರೆಯವರ ಕಾವ್ಯದಲ್ಲಿ ವೈವಿಧ್ಯತೆ ಇದೆ. ವೈವಿಧ್ಯತೆ ಶ್ರೇಷ್ಠ ಕಾವ್ಯದ, ಶ್ರೇಷ್ಠ ಕವಿಯ ಲಕ್ಷಣವಾಗಿದೆ. ಶಬ್ದ, ಅರ್ಥ, ಅನುಭಾವ ಮೀರಿದ ಸಂಗತಿಗಳೂ ಅವರ ಕಾವ್ಯದಲ್ಲಿ ಕಾಣಬಹುದು. ಬೇಂದ್ರೆ ಸ್ವತಃ ಪ್ರಕೃತಿಯಾಗಿದ್ದರು. ಬೇಂದ್ರೆ ಕಾವ್ಯ ಸಾರ್ವಕಾಲಿಕ. ಬೇಂದ್ರೆ ಜೀವನಾನುಭವದಲ್ಲಿ ಸಾರ್ವತ್ರಿಕತೆ ಇದ್ದುದರಿಂದ ಅವರ ಕಾವ್ಯಕ್ಕೆ ಸಾರ್ವಕಾಲಿಕತೆ ಪ್ರಾಪ್ತವಾಯಿತು. ಬೇಂದ್ರೆಯವರಷ್ಟು ಕ್ರಿಯಾಶೀಲವಾಗಿ, ಸೃಜನಶೀಲವಾಗಿ ಜನಪದವನ್ನು ಬಳಸಿಕೊಂಡಷ್ಟು ಬೇರಾವ ಆಧುನಿಕ ಕನ್ನಡ ಕವಿಯೂ ಬಳಸಿಕೊಳ್ಳಲಿಲ್ಲ. ಬೇಂದ್ರೆಯವರು ಭಾವಗೀತೆಗಳಿಗೆ ಹೊಸ ಶಕ್ತಿ ತಂದುಕೊಟ್ಟರು ಎಂದು ಅವರು ವಿವರಿಸಿದರು.




ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಅಧ್ಯಕ್ಷ ಡಾ. ಡಿ.ಎಂ. ಹಿರೇಮಠ ಅವರನ್ನು ಹಿರಿಯ ರಾಜಕಾರಣಿ ಬಿ.ಎಲ್. ಸಂತೋಷ್ ಅಭಿನಂದಿಸಿದರು




ನವದೆಹಲಿಯ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆಯ ವಿದ್ಯಾರ್ಥಿಗಳಿಂದ ಯೋಗ ಪ್ರದರ್ಶನ

# ರಂಜಿಸಿದ ಮಹಿಳಾ ಯಕ್ಷಗಾನ

ದೆಹಲಿ ಕರ್ನಾಟಕ ಸಂಘವು ದಿನಾಂಕ 29.09.2019ರಂದು ಶ್ರೀಮತಿ ಟಿ. ಎನ್. ಜ್ಯೋತಿಯವರ ನಿರ್ದೇಶನದಲ್ಲಿ ಆಯೋಜಿಸಿದ್ದ 'ಮಹಿಷ ಮರ್ಧಿನಿ' ಯಕ್ಷಗಾನವು, ಮಹಿಳಾ ಕಲಾವಿದರ ಶಕ್ತಿ ಮತ್ತು ಸೃಜನಶೀಲತೆಯನ್ನು ಅದ್ಭುತವಾಗಿ ಅನಾವರಣ ಮಾಡಿತು. ದೆಹಲಿ ಕನ್ನಡಿಗರನ್ನು ರಂಜಿಸಿದ ಈ ಯಕ್ಷಗಾನವನ್ನು ಶ್ರೀ ಕುಮಾರ ಸಾಂಸ್ಕೃತಿಕ ಪ್ರತಿಷ್ಠಾನ ಹಳುವಳ್ಳಿ ಕಳಸ, ಇವರು ಪ್ರದರ್ಶಿಸಿದರು.

ಹಿಮ್ಮೇಳದಲ್ಲಿ ಶ್ರೀ ಪಟ್ಲ ಸತೀಶ್ ಶೆಟ್ಟಿಯವರ ಗರಡಿಯಲ್ಲಿ ಪಳಗಿದ ಕು. ಅಮೃತಾ ಅಡಿಗ ಅವರ ಭಾಗವತಿಕೆಯು ಸೊಗಸಾಗಿ ಮೂಡಿಬಂತು. ಮಹಿಷ ಮರ್ಧಿನಿ ಪ್ರಸಂಗದ ವಿವಿಧ ಭಾವಗಳನ್ನು ಸುಶ್ರಾವ್ಯವಾಗಿ ಅವರು ಪ್ರಕಟಪಡಿಸಿದರು. ಹಿಮ್ಮೇಳದ ಚೆಂಡೆ ಮತ್ತು ಮದ್ದಳೆಯೂ ಪರಿಣಾಮವಾಗಿತ್ತು. ಮುಮ್ಮೇಳದಲ್ಲಿ ಮಹಿಷಾಸುರ, ಮಾಲಿನಿ, ಅಸುರರ ಪಡೆ, ದೇವ ಪಡೆ, ಹಾಸ್ಯ ಎಲ್ಲವೂ ಕಲಾವಿದರ ನುರಿತ ಕಲಾವಂತಿಕೆಯನ್ನು ಎತ್ತಿತೋರಿಸಿತು. 'ಗಂಡು ಕಲೆಯೆಂದು' ಸಾಂಪ್ರದಾಯಕವಾಗಿ ಕರೆಯಿಸಿಕೊಳ್ಳುತ್ತಿರುವ ಯಕ್ಷಗಾನವು ಇದೀಗ ಗಂಡಸರಿಗೇನೂ ಸೀಮಿತವಾಗಿಲ್ಲ ಎಂಬುದನ್ನು ಸಶಕ್ತವಾಗಿ ತೋರಿಸಿತು.



ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಕಲಾವಿದರನ್ನು ಅಭಿನಂದಿಸಿ ಮಾತಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ. ಅವರು ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

## ಮಲೆನಾಡಿನ ಏಕೈಕ ಮಹಿಳಾ ಮಕ್ಕಳ ಯಕ್ಷಗಾನ ತಂಡ



**ದೆಹಲಿ ಕರ್ನಾಟಕ ಸಂಘದ ಅಭಿನಂದನೆ ಸ್ವೀಕರಿಸಿದ ತಂಡದ ಕಲಾವಿದರು**

ಸಸ್ಯಶಾಮಲೆ ಪ್ರಕೃತಿಮಾತೆಯು ಕಂಗೊಳಿಸುತ್ತಿರುವ ಪ್ರದೇಶ ಮಲೆನಾಡು. ಅಂತಹ ಮಲೆನಾಡಿನ ಒಂದು ಪುಟ್ಟ ಊರು ಹಳುವಳ್ಳಿ. ಈ ಪ್ರದೇಶಕ್ಕೆ ಯಕ್ಷಗಾನ ಏನು ಹೊಸತಲ್ಲದಿದ್ದರೂ ಅಲ್ಲಿಯದ್ದೇ ಆದ ತಂಡ ಎಂಬುದು ಇರಲಿಲ್ಲ. ಆ ಹೊತ್ತಿಗೆ ಶ್ರೀಮತಿ ಜ್ಯೋತಿ ಟಿ.ಎನ್. ಅವರಿಂದ 15ಮಕ್ಕಳ ಒಂದು ತಂಡ ತಯಾರಾಗಿ ಪ್ರದರ್ಶನವನ್ನು ನೀಡಲಾರಂಭಿಸಿದರು. ಈ ರೀತಿ ಪ್ರಾರಂಭಗೊಂಡ ತಂಡವು ಈಗಾಗಲೆ 15 ವರ್ಷವನ್ನು ಯಶಸ್ವಿಯಾಗಿ ಪೂರೈಸಿದೆ.

ಮಲೆನಾಡಿನ ಏಕೈಕ ಮಹಿಳಾ ಮಕ್ಕಳ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾದ ಈ ತಂಡವೂ ರಾಜ್ಯದೆಲ್ಲೆಡೆ ಸುಮಾರು 600ಕ್ಕೂ ಹೆಚ್ಚು ಯಶಸ್ವಿ ಪ್ರದರ್ಶನವನ್ನು ನೀಡಿದೆ. ಈ ತಂಡವು ಸರಿ ಸುಮಾರು 15 ಪೌರಾಣಿಕ ಪ್ರಸಂಗಗಳನ್ನು ಲೀಲಾಜಾಲವಾಗಿ ಪ್ರದರ್ಶಿಸುವ ಕೌಶಲವನ್ನು ಹೊಂದಿದೆ. ರಾಜ್ಯ, ರಾಷ್ಟ್ರ ಅಷ್ಟೇ ಅಲ್ಲದೆ ಅಂತರರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ವೇದಿಕೆಗಳಲ್ಲಿ ತಮ್ಮ ಯಕ್ಷಗಾನ ಪ್ರದರ್ಶನವನ್ನು ನೀಡಿ ಜನಮನ್ನಣೆಯನ್ನು ಗಳಿಸಿದೆ. ಅದೇ ರೀತಿ ಯಕ್ಷಗಾನದ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ದೆಹಲಿ ಕನ್ನಡಿಗರು ದೊಡ್ಡ ಸಂಖ್ಯೆಯಲ್ಲಿ ಸೇರಿ, ಯಕ್ಷಗಾನ ಪ್ರದರ್ಶನವನ್ನು ಪ್ರೋತ್ಸಾಹಿಸಿದರು. ಅನೇಕರು ಫೇಸ್ ಬುಕ್ ಮೂಲಕ ಲೈವ್ ಮಾಡಿದ್ದರಿಂದ ಸಾವಿರಾರು ಜನರು ಯಕ್ಷಗಾನವನ್ನು ವೀಕ್ಷಿಸುವಂತಾಯಿತು.

## ನಾಲ್ಕು ದಶಕಗಳನ್ನು ಪೂರ್ಣಗೊಳಿಸುತ್ತಿರುವ ದೆಹಲಿಯ ಗೋಕರ್ಣ ಮಂಡಳ

ದೆಹಲಿ ಕನ್ನಡ ವಲಯದಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುವ ಗೋಕರ್ಣ ಮಂಡಳಕ್ಕೆ ಇದೀಗ ನಾಲ್ಕು ದಶಕಗಳನ್ನು ಪೂರೈಸಿದ ಹೆಮ್ಮೆ. ತನ್ನಿಮಿತ್ತವಾಗಿ ಅದು ಇದೇ ಬರುವ ಅಕ್ಟೋಬರ್ 19ರಂದು ಶನಿವಾರ, ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 40ನೇ ವಾರ್ಷಿಕೋತ್ಸವವನ್ನು ಹಮ್ಮಿಕೊಂಡಿದೆ. ಮಧ್ಯಾಹ್ನ ಗಂಟೆ 2:30 ರಿಂದ ಪ್ರಾರಂಭವಾಗಲಿರುವ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ, ನವದೆಹಲಿಯ ಉಪಕುಲಪತಿಗಳಾದ ಪ್ರೊ॥ ಪರಮೇಶ್ವರ. ಎನ್. ಶಾಸ್ತ್ರೀ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಹಲವು ಗಣ್ಯರಿಗೆ ಸನ್ಮಾನ, ವಿದ್ಯಾರ್ಥಿಗಳಿಗೆ ಪುರಸ್ಕಾರ ಮತ್ತು ಆಕರ್ಷಕವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಶಿರಸಿಯಲ್ಲಿ ಕಳೆದ ಹಲವು ದಶಕಗಳಿಂದ ಸಂಗೀತದ ಸೇವೆ ಮಾಡುತ್ತಿರುವ ಪಂ. ಎಂ.ಪಿ.ಹೆಗಡೆಯವರಿಂದ ಸುಗಮ ಸಂಗೀತ ಕಾರ್ಯಕ್ರಮವಿದೆ ಮತ್ತು ಸಂಜೆ ಗಂಟೆ 5:30 ರಿಂದ ನಡೆಯಲಿರುವ 'ಸುಧನ್ವಾರ್ಜುನ ಕಾಳಗ' ಯಕ್ಷಗಾನ ಪ್ರಸಂಗವನ್ನು ಕಾಶ್ಯಪ ಪ್ರತಿಷ್ಠಾನ, ಮಹಿಳಾ ಯಕ್ಷಗಾನ ಮಂಡಳ ಗಡಿಗೆಹೊಳೆ, ಶಿರಸಿ ಇವರು ಪ್ರದರ್ಶಿಸಲಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಸರ್ವರಿಗೂ ಸ್ವಾಗತ.

**ಡಾ. ಎಂ. ಎನ್ ಭಟ್**

# ಸಡಗರದ ಗಣೇಶ ಸಾಂಸ್ಕೃತಿಕ ಉತ್ಸವ





ದೆಹಲಿ ಕರ್ನಾಟಕ ಸಂಘದಲ್ಲಿ ಗಣೇಶ ಸಾಂಸ್ಕೃತಿಕ ಉತ್ಸವವನ್ನು ಅತ್ಯಂತ ಭಕ್ತಿ, ಶ್ರದ್ಧೆ ಮತ್ತು ಸಡಗರದಿಂದ ಸೆಪ್ಟೆಂಬರ್ 2ರಂದು ಬೆಳಗ್ಗೆ ಆಚರಿಸಲಾಯಿತು. ಸ್ಥಳೀಯ ರಾಘವೇಂದ್ರ ಸ್ವಾಮಿ ಮಠದ ಆಚಾರ್ಯರ ಮೂಲಕ ವಿಧಿಯುಕ್ತವಾಗಿ ಮೂರ್ತಿಯ ಸ್ಥಾಪನೆ, ಪೂಜೆ ಹಾಗೂ ಮಂಗಳಾರತಿಯ ಮೂಲಕ ಸಂಘದ ಎಲ್ಲ ಪದಾಧಿಕಾರಿಗಳು, ಹಿರಿಯ ಸದಸ್ಯರುಗಳ ಸಮ್ಮುಖದಲ್ಲಿ ನೆರವೇರಿತು.

ನಿರಂತರವಾಗಿ ಮೂರು ದಿನಗಳ ಕಾಲ ಬೆಳಗ್ಗೆ ಮತ್ತು ಸಂಜೆ ನೈವೇದ್ಯ, ಪೂಜೆ, ಮಂಗಳಾರತಿ ಕಾರ್ಯಕ್ರಮ ಭಕ್ತ ಜನಗಳ ಸಮ್ಮುಖದಲ್ಲಿ ನಡೆಯಿತು. ಸೆಪ್ಟೆಂಬರ್ 4ರಂದು ಮಹಾಮಂಗಳಾರತಿಯ ನಂತರ ಸರ್ವಾಲಂಕೃತನಾದ ವಿಘ್ನರಾಜ ಮೂರ್ತಿಯನ್ನು ನೆರೆದಿದ್ದ ನೂರಾರು ಭಕ್ತಜನರು ಮೆರವಣಿಗೆಯೊಂದಿಗೆ ವಿಧಿಯುಕ್ತವಾಗಿ ವಿಸರ್ಜಿಸಿದರು.

ಈ ಬಾರಿಯ ಗಣೇಶ ಉತ್ಸವದ ಮಂಟಪದ ಅಲಂಕಾರವನ್ನು ಹಿರಿಯ ಕಲಾವಿದ ಸುಧೀರ್ ಘಡ್ನೀಸ್ ಅವರು ನಡೆಸಿಕೊಟ್ಟಿದ್ದು ಅವರು ನಿರ್ಮಿಸಿದ 'ಕಲಶ ಗಣಪ' ವಿಶೇಷ ಮೆಚ್ಚುಗೆ ಪಡೆಯಿತು.

# ಮೂವತ್ತೆರಡನೇ ವರ್ಷಕ್ಕೆ ಮತ್ತೆ ಬಾ ಗಣಪ

ಭಾದ್ರಪದ ಶುಕ್ಲದ ಚೌತಿಯಂದು ದೆಹಲಿಯ ಕನ್ನಡ ವಲಯದಲ್ಲಿ ಅತ್ಯಂತ ಶ್ರದ್ಧೆಯಿಂದ ಚಾಚೂ ತಪ್ಪದೇ ಗಣೇಶನನ್ನು ಕರೆತಂದು ಅದ್ದೂರಿಯಾಗಿ ಪೂಜಿಸುವ ಕೈಂಕರ್ಯವನ್ನು ಗಣೇಶ ಮಿತ್ರ ಮಂಡಳಿಯು ನಡೆಸಿಕೊಂಡು ಬಂದಿದೆ. ಈ ಬಾರಿಯೂ ಕೂಡ ಮಂಡಳಿಯು ಸೆಪ್ಟೆಂಬರ್ 2ರಂದು ಗಣೇಶನ ಮೂರ್ತಿಯನ್ನು ಸಂಘದ ಆವರಣದಲ್ಲಿ ಇಟ್ಟು ಪೂಜಿಸುವ ಮೂಲಕ ತನ್ನ 31ನೇ ವರ್ಷದ ಉತ್ಸವವನ್ನು ಅತ್ಯಂತ ಅಚ್ಚುಕಟ್ಟಾಗಿ ನಡೆಸಿತು. ಏಕದಂತನ ಪೂಜೆ ಬೆಳಗ್ಗೆ ಸಮಯ 8:20ಕ್ಕೆ ಪ್ರಾರಂಭವಾಯಿತು. ರಾಘವೇಂದ್ರ ಮಠದ ಅರ್ಚಕರ ಸಾರಥ್ಯದಲ್ಲಿ ಸಂಘದ ಸಕ್ರಿಯ ಸದಸ್ಯರಾದ ಶ್ರೀ ಶ್ರೀನಾಥ್ ಎನ್.ಆರ್ ದಂಪತಿಗಳು ಪೂಜೆಯನ್ನು ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆಯವರೂ ಕೂಡಾ ಉತ್ಸವದಲ್ಲಿ ಪಾಲ್ಗೊಂಡು ವಿಘ್ನೇಶ್ವರನ ಆಶೀರ್ವಾದ ಪಡೆದರು. ಶ್ರೀ ಸುಧೀರ್ ಘಡ್ನೀಸ್



ಅವರು ಪೀಠವನ್ನು ಅತ್ಯಂತ ಸುಂದರವಾಗಿ ಅಲಂಕರಿಸಿದ್ದರು. ಕರ್ನಾಟಕ ಫುಡ್ ಸೆಂಟರ್‌ನ ಸಹಯೋಗದಲ್ಲಿ ನಡೆದ ಈ ಗಣೇಶೋತ್ಸವದಲ್ಲಿ ಶ್ರೀಯುತರಾದ ಶೇಖರ ಬಂಗೇರ, ಸಿ.ಆರ್. ಶ್ರೀನಿವಾಸ್, ಶಶಿಕಾಂತ್ ಪಾಟೀಲ್, ಅಶೋಕ್ ಕುಮಾರ್, ಶೇಖರ್ ಎಂ. ಆರ್, ಟಿ.ಎಂ ಮೈಲಾರಪ್ಪ, ಶರೀಫ್ ಹಾಗೂ ಇನ್ನಿತರ ಭಕ್ತಾದಿಗಳು ಪಾಲ್ಗೊಂಡರು.

**ಸಂತೋಷ್ ಉಪಾಧ್ಯಾಯ**

# ‘ಅಧಿಕಾರಸ್ಥರನ್ನು ಪ್ರಶ್ನಿಸುವುದೇ ಗಣರಾಜ್ಯ ಪರಿಕಲ್ಪನೆ’

## -ಕವಿ ಅಶೋಕ್ ವಾಜಪೇಯಿ

“ಗಣರಾಜ್ಯ ಪರಿಕಲ್ಪನೆ ಎಂಬುದು ಅಧಿಕಾರದ ಚುಕ್ಕಾಣಿಯಲ್ಲಿ ಕುಳಿತಿರುವವರನ್ನು ಪ್ರಶ್ನಿಸುವ ಪರಿಕಲ್ಪನೆಯಾಗಿದೆ” ಎಂದು ಖ್ಯಾತ ಹಿಂದಿ ಕವಿ ಮತ್ತು ವಿಮರ್ಶಕ ಅಶೋಕ್ ವಾಜಪೇಯಿ ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಸೆಪ್ಟಂಬರ್ 3, 2019 ರಂದು ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವು ಆಯೋಜಿಸಿದ್ದ “ಗಿರೀಶ್ ಕಾರ್ನಾಡ್‌ರಿಗೆ ನಮನಗಳು” ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತಾಡುತ್ತಿದ್ದರು. ಕನ್ನಡದ ಖ್ಯಾತ ನಾಟಕಕಾರ ಗಿರೀಶ್ ಕಾರ್ನಾಡರನ್ನು ಆಪ್ತವಾಗಿ ಸ್ಮರಿಸಿಕೊಂಡ ಅವರು ‘ಅಧಿಕಾರದಲ್ಲಿ ಯಾವುದೇ ಪಕ್ಷ ಇರಲಿ ಅದನ್ನು ಪ್ರಶ್ನಿಸುವುದು ಬರಹಗಾರರು ಮತ್ತು ಕಲಾವಿದರ ಕರ್ತವ್ಯ, ಈ ಕೆಲಸವನ್ನು ಕಾರ್ನಾಡರು ತಮ್ಮ ಕೊನೆ ಉಸಿರಿರುವ ತನಕ ಮಾಡುತ್ತಲೇ ಬಂದರು, ಅಧಿಕಾರದೊಂದಿಗೆ ಅವರೆಂದೂ ರಾಜಿಮಾಡಿಕೊಳ್ಳಲಿಲ್ಲ, ಅವರ ನಾಟಕಗಳು ನಮಗೆ ಪ್ರಶ್ನೆ ಕೇಳಲು ಕಲಿಸಿದುವು’ ಎಂದು ವಿವರಿಸಿದರು. ‘ಗಣರಾಜ್ಯಕ್ಕೆ ಇವತ್ತು ಅಪಾಯ ಬಂದಿದೆ, ಎಲ್ಲ ಬರಹಗಾರರು ಅದನ್ನು



**ಅಶೋಕ್ ವಾಜಪೇಯಿ**

ಪ್ರಶ್ನಿಸಬೇಕು, ಪ್ರಜಾಪ್ರಭುತ್ವವನ್ನು ರಕ್ಷಿಸಬೇಕು, ಅಂತಹ ಬದ್ಧತೆಯನ್ನು ತೋರಿಸುವುದರ ಮೂಲಕ ಕಾರ್ನಾಡರಿಗೆ ಗೌರವ ಸೂಚಿಸೋಣ ಎಂದವರು ಮಾರ್ಮಿಕವಾಗಿ ನುಡಿದರು.

ಕಾರ್ಯಕ್ರಮಕ್ಕೆ ಮತ್ತೋರ್ವ ಅತಿಥಿಯಾಗಿ ಬಂದಿದ್ದ ಕಥೆಗಾರ ವಿವೇಕ ಶಾನಭಾಗ ಅವರು ತಮ್ಮ ತಾಯಿ ಹಾಗೂ ಕಾರ್ನಾಡರು ಶಾಲೆಯಲ್ಲಿ ಸಹಪಾಠಿಗಳಾಗಿದ್ದರೆಂಬುದನ್ನು ಸ್ಮರಿಸಿಕೊಂಡು, ಮುಂದೆ ಕಾರ್ನಾಡರು ಹೇಗೆ ತಮ್ಮೊಡನೆ ಆತ್ಮೀಯವಾದ ಸಂಬಂಧವನ್ನು ಬೆಳೆಸಿಕೊಂಡು ಹೋದರೆಂಬುದನ್ನು ಬಹಳ ಸೂಕ್ಷ್ಮವಾಗಿ ವಿವರಿಸುತ್ತಾ, ಕಾರ್ನಾಡರ ಮಾನವೀಯ



**‘ತಲೆದಂಡ’ ನಾಟಕದ ಹಿಂದಿ ಅನುವಾದ ‘ರಕ್ತ ಕಲ್ಯಾಣ್’ ನಾಟಕದ ದೃಶ್ಯ**

ಮುಖವನ್ನು ಆಪ್ತವಾಗಿ ತೆರೆದಿಟ್ಟರು.

ಆನಂತರ ಕಾರ್ನಾಡರ ‘ತಲೆದಂಡ’ ನಾಟಕದ ಹಿಂದಿ ಅನುವಾದ ‘ರಕ್ತ ಕಲ್ಯಾಣ್’ ನಾಟಕದ ನಿರ್ದೇಶಕ ಹಾಗೂ ಎನ್.ಎಸ್.ಡಿ ಪ್ರಾಧ್ಯಾಪಕ ಶಂತನ್ ಬಸು ಮಾತನಾಡಿ “ದೆಹಲಿಯಲ್ಲಿ ನಾಟಕ ಕೇವಲ ಬೀದಿ ನಾಟಕಕ್ಕೆ ಸೀಮಿತವಾಗಿದ್ದಾಗ ಮಹಾರಾಷ್ಟ್ರದಿಂದ ವಿಜಯ್ ತೆಂಡೂಲ್ಕರ್, ಬಂಗಾಳದಿಂದ ಬಾದಲ್ ಸರ್ಕಾರ್ ಹಾಗೂ ಕರ್ನಾಟಕದಿಂದ ಕಾರ್ನಾಡರು ಭಾರತೀಯ ರಂಗಭೂಮಿಗೆ ಹೊಸದೊಂದು ಪರಿಕಲ್ಪನೆಯನ್ನು ನೀಡಿದರು” ಎಂದು ಹೇಳಿ, ಕಾರ್ನಾಡ್ ನಾಟಕಗಳನ್ನು ರಂಗದ ಮೇಲೆ ಪ್ರಯೋಗಗೊಳಿಸುವಾಗ ತಮಗಾದ ಅನುಭವಗಳನ್ನು ಹಂಚಿಕೊಂಡರು. ರಕ್ತ ಕಲ್ಯಾಣ ನಾಟಕದ ವಸ್ತುವನ್ನೂ ವಿಶ್ಲೇಷಿಸಿದರು.

ಜೆ.ಎನ್.ಯು.ವಿನ ಭಾರತೀಯ ಭಾಷಾ ಕೇಂದ್ರದ ಉರ್ದು ಪ್ರಾಧ್ಯಾಪಕ ಹಾಗೂ ಕವಿ ಪ್ರೊ. ಅನ್ವರ್ ಆಲಂ ಪಾಷಾ ಅವರು ಮಾತಾಡಿ, ಭಾರತೀಯ ರಂಗಭೂಮಿಗೆ ಕಾರ್ನಾಡರ ನಾಟಕಗಳ ಕೊಡುಗೆಯನ್ನು ವಿಶ್ಲೇಷಿಸಿದರು. ತುಘಲಕ್ ನಾಟಕವು ಭಾರತೀಯ ರಂಗಭೂಮಿಯ ಸಾರ್ವಕಾಲಿಕ ನಾಟಕವಾಗಿದೆ ಎಂದು ಅವರು ಕೊಂಡಾಡಿದರು. ಈ ಹಂತದಲ್ಲಿ ಅವರು ಕಾರ್ನಾಡರನ್ನು ಕೇಂದ್ರದಲ್ಲಿರಿಸಿಕೊಂಡು ಹೇಳಿದ ಉರ್ದು ಶಾಯಿರಿಯು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಕಾರ್ಯಕ್ರಮದ ಆರಂಭದಲ್ಲಿ ಶ್ರೀಮತಿ ಪೂಜಾ ರಾವ್ ಮತ್ತು ತಂಡದವರು ಕಾರ್ನಾಡರ ರಂಗಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಕನ್ನಡ ಪೀಠದ ಪ್ರಾಧ್ಯಾಪಕ ಪ್ರೊ. ಪುರುಷೋತ್ತಮ ಬಿಳಿಮಲೆಯವರು ಎಲ್ಲರನ್ನೂ ಸ್ವಾಗತಿಸಿದರು. ಸಂಶೋಧಕಿ ಸ್ವಾತಿ ಸಿಂಹ ಅವರು ಕಾರ್ಯಕ್ರಮ ನಿರೂಪಿಸಿದರು,

ಸಭಾ ಕಾರ್ಯಕ್ರಮದ ನಂತರ ಎನ್.ಎಸ್.ಡಿಯ ಹಿರಿಯ ವಿದ್ಯಾರ್ಥಿಗಳು ಶಂತನು ಬೋಸ್ ನಿರ್ದೇಶಿಸಿದ ಕಾರ್ನಾಡರ ತಲೆದಂಡ ನಾಟಕದ ಹಿಂದಿ ಅನುವಾದ ‘ರಕ್ತ ಕಲ್ಯಾಣ್’ ನಾಟಕವನ್ನು ಭಿನ್ನವಾಗಿ ಪ್ರದರ್ಶಿಸಿದರು. ಪ್ರಾಧ್ಯಾಪಕ ಪ್ರೊ. ಶಿವಪ್ರಕಾಶ್ ಅವರು ಕಲಾವಿದರನ್ನು ಅಭಿನಂದಿಸಿದರು. ಸುಮಾರು 350 ಕ್ಕೂ ಹೆಚ್ಚು ಪ್ರೇಕ್ಷಕರು ಕಾರ್ಯಕ್ರಮವನ್ನು ಕೊನೆತನಕ ವೀಕ್ಷಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ಕೃಷ್ಣಮೂರ್ತಿ**

---

# ದೆಹಲಿ ಪೋಲಿಸ್ ಕನ್ನಡಿಗರ ಸಮಿತಿಯ ಅಧ್ಯಕ್ಷರಾಗಿ ಆರ್.ಟಿ. ನಾರಾಯಣ



ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯ ನೂತನ ಅಧ್ಯಕ್ಷರಾಗಿ ಆರ್. ಟಿ. ನಾರಾಯಣ ಆಯ್ಕೆಯಾಗಿದ್ದಾರೆ. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿಯು ದಿನಾಂಕ 29.09.2019ರಂದು ಅಶೋಕ ವಿಹಾರದ ಪೋಲಿಸ್ ಕಾಲೋನಿಯಲ್ಲಿ ಸಭೆ ಸೇರಿ ಅವಿರೋಧವಾಗಿ ಈ ಕೆಳಗಿನ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ನೂತನ ಸಮಿತಿ ಇಂತಿದೆ.

ಅಧ್ಯಕ್ಷ–ಶ್ರೀ ಆರ್.ಟಿ. ನಾರಾಯಣ, ಉಪಾಧ್ಯಕ್ಷ–ಶ್ರೀ ನಂಜುಂಡಯ್ಯ, ಪ್ರಧಾನ ಕಾರ್ಯದರ್ಶಿ–ಶ್ರೀ ಟಿ.ಡಿ. ಮಹೇಶ್, ಜಂಟಿ ಕಾರ್ಯದರ್ಶಿ–ಕೆ.ಪಿ. ಸುರೇಶ್, ಖಜಾಂಚಿ–ಶ್ರೀ ಜಯರಾಮ್

ಸದಸ್ಯರು : ಶ್ರೀ ಸಿ.ಎಂ. ನಾಗರಾಜ, ಶ್ರೀ ಚರ್ಮಣ್ಣ, ಶ್ರೀ ಮಂಜುನಾಥ ಕೆ.ಜೆ., ಶ್ರೀ ಜಗನ್ನಾಥ, ಶ್ರೀ ವಿಜಿ ಕುಮಾರ್, ಶ್ರೀ ರಂಗನಾಥ ಎಲ್., ಶ್ರೀ ಪೀರಪ್ಪ, ಶ್ರೀ ಮಂಜುನಾಥ ಕೆ.ಜೆ., ಶ್ರೀ ಮಹಾದೇವ ಮತ್ತು ಶ್ರೀ ಎ.ಟಿ. ಶ್ರೀನಿವಾಸ.

**ಸಿ.ಎಂ. ನಾಗರಾಜ**

# ದೆಹಲಿಗೂ ವಿಜಯಪುರಕ್ಕೂ ನಾಟಕದ ನಂಟು...!!

ವಿಜಯಪುರದ ಕಂದಗಲ್ಲ ಹಣಮಂತರಾಯ ರಂಗ ಮಂದಿರದಲ್ಲಿ ಡಾ. ಎಂ. ಎಂ ಕಲಬುರ್ಗಿಯವರು ರಚಿಸಿದ ಮೂರು ನಾಟಕಗಳ ಪ್ರದರ್ಶನ ನಡೆಯುವಾಗ ಆ ನಾಟಕಗಳ ಹಿಂದೆ ದೆಹಲಿ ಕನ್ನಡಿಗನೊಬ್ಬನ ಕೈಚಳಕ ಅಡಗಿತ್ತು! ತಾನು ಹುಟ್ಟಿ ಬೆಳೆದ ಪರಿಸರದಲ್ಲಿ ಪ್ರತಿಭೆಯನ್ನು ತೋರಿಸುವುದು ಎಲ್ಲರ ಕನಸಾದರೂ ಕೂಡಾ ಅಂಥ ಒಂದು ಅವಕಾಶ ಒದಗಿ ಬರುವುದು ಅತ್ಯಂತ ಅಪರೂಪ. ಆ ಅವಕಾಶವನ್ನು ಪಡೆದು ಧನ್ಯತೆಯ ಅನುಭವ ಪಡೆದುಕೊಂಡವರು ನಮ್ಮ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಶಿವಾನಂದ ಇಂಗಳೇಶ್ವರರು.

ಬಿ.ಎಲ್.ಡಿ.ಇ ಸಂಸ್ಥೆ, ವಚನ ಪಿತಾಮಹ ಡಾ. ಫ.ಗು ಹಳಕಟ್ಟಿ ಸಂಶೋಧನ ಕೇಂದ್ರ ಪ್ರಸ್ತುತ ಪಡಿಸಿದ ಭವ್ಯ ನಾಟಕೋತ್ಸವದಲ್ಲಿ 'ಖರೇ ಖರೇ ಕಿತ್ತೂರು ಬಂಡಾಯ', 'ಕೆಟ್ಟಿತ್ತು ಕಲ್ಯಾಣ' ಮತ್ತು 'ಖರೇ ಖರೇ ಸಂಗ್ಯಾ ಬಾಳ್ಯಾ' ನಾಟಕಗಳು ಪ್ರದರ್ಶನ ಕಂಡವು. ಎರಡು ನಾಟಕಗಳನ್ನು ನಿರ್ದೇಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಸೆಪ್ಟೆಂಬರ್ 13 ರಿಂದ 15ರ ವರೆಗೆ ನಡೆದ ಈ ನಾಟಕೋತ್ಸವದಲ್ಲಿ ಡಾ. ಎಂ.ಎಂ ಕಲಬುರ್ಗಿಯವರು ಸಂಶೋಧನೆ ಮಾಡಿ ಬರೆದ ನಾಟಕಗಳು ಜನರಲ್ಲಿ ಇತಿಹಾಸದ ವಾಸ್ತವವನ್ನು ಅರ್ಥೈಸಿಕೊಡುವಲ್ಲಿ ಅತ್ಯಂತ ಯಶಸ್ವಿಯಾದವು. ಮೊದಲನೇ ನಾಟಕ 'ಖರೇ ಖರೇ ಕಿತ್ತೂರು ಬಂಡಾಯ'ದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಥ್ಯಾಕರೆ ಸಾಹೇಬನ ನಡುವೆ ನಡೆದ ಯುದ್ಧಕ್ಕೆ ನಿಜವಾದ ಕಾರಣಗಳೇನು? ಯಾವೆಲ್ಲ ತಪ್ಪು ಕಲ್ಪನೆಗಳಿಂದ ಆ ಯುದ್ಧ ನಡೆಯಿತು ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಡುವಲ್ಲಿ ನಿರ್ದೇಶಕ ಇಂಗಳೇಶ್ವರರು ಮತ್ತು ಯುವ ಕಲಾವಿದರು ಯಶಸ್ವಿಯಾದರು. ಎರಡನೇ ನಾಟಕ 'ಕೆಟ್ಟಿತ್ತು ಕಲ್ಯಾಣ'ದಲ್ಲಿ ಬಸವಣ್ಣನವರ ಮನಸ್ಸಿನಲ್ಲಿ ಯಾವ ರೀತಿ ವಿಚಾರಗಳು ಮಂಥನಗೊಂಡವು, ಪುರೋಹಿತಶಾಹೀ ಪ್ರವೃತ್ತಿಯು ಕಲ್ಯಾಣವನ್ನು ಕೆಡಿಸಲು ಏನೆಲ್ಲಾ ಮಾಡಿತು ಮತ್ತು ಹಾಗೆ ಮಾಡುವಲ್ಲಿ ಯಶಸ್ಸು ಕಂಡಿತು ಎಂಬುದನ್ನು ರಂಗಭೂಮಿಯ ಕಲಾವಿದರು ಪ್ರದರ್ಶಿಸಿದರು. ನಾಟಕವನ್ನು ಶ್ರೀ ಸಂಗಮೇಶ ಬದಾಮಿ ನಿರ್ದೇಶಿಸಿದರು. ಮೂರನೇ ಹಾಗೂ ಕೊನೆಯ ನಾಟಕ 'ಖರೇ ಖರೇ ಸಂಗ್ಯಾ ಬಾಳ್ಯಾ'ದಲ್ಲಿ ಜಾನಪದ ಹಾಡು ಮತ್ತು ನೃತ್ಯಗಳನ್ನು ಯಶಸ್ವಿಯಾಗಿ ಬಳಸಿಕೊಂಡ ಇಂಗಳೇಶ್ವರರು ಹುಟ್ಟೂರಿನಲ್ಲಿ ಸೈ ಎನಿಸಿಕೊಂಡರು. ನಾಟಕೋತ್ಸವದ ಬಳಿಕ ಮಾತನಾಡಿದ ಅವರು ಹುಟ್ಟೂರಿನಲ್ಲಿ ಇಂಥ ಅವಕಾಶವನ್ನು ಒದಗಿಸಿಕೊಟ್ಟ ಬಿ.ಎಲ್.ಡಿ.ಇ ಸಂಸ್ಥೆ ಮತ್ತು ಡಾ. ಫ.ಗು ಹಳಕಟ್ಟಿ ಸಂಶೋಧನ ಕೇಂದ್ರದ ಸದಸ್ಯರು ಹಾಗೂ ಸಿಬ್ಬಂದಿಗಳಿಗೆ ಮತ್ತು ನಾಟಕಗಳನ್ನು ನೋಡಿ ಪ್ರೋತ್ಸಾಹಿಸಿದ ವಿಜಯಪುರದ ಕಲಾಭಿಮಾನಿಗಳಿಗೆ ಚಿರ ಋಣಿಯಾಗಿದ್ದೇನೆ, ಇಂಥ ನಾಟಕಗಳನ್ನು ದೆಹಲಿ ವಲಯಕ್ಕೂ ಪರಿಚಯಿಸಬೇಕು ಎಂದು ಹೇಳಿದರು.



ಶಿವಾನಂದ ಇಂಗಳೇಶ್ವರ ನಿರ್ದೇಶನದ 'ಖರೇ ಖರೇ ಸಂಗ್ಯಾ ಬಾಳ್ಯಾ' ನಾಟಕದ ದೃಶ್ಯ

**ಸಂತೋಷ್ ಉಪಾಧ್ಯಾಯ**

# ಡಾ. ಅಹಲ್ಯಾ ಚಿಂತಾಮಣಿ ಅವರಿಗೆ ಗುರುವಂದನೆ

ನಮ್ಮ ಕನಸುಗಳಿಗೆ ಜೀವ ಕೊಡುವ ಮೂಲ ಸ್ಥಳವೇ ಶಾಲೆ. ಶಿಕ್ಷಕರೇ ನಮ್ಮ ಭವಿಷ್ಯದ ನಿರ್ಮಾತೃರು. ಜೀವನದಲ್ಲಿ ಗುರುವಿಲ್ಲದೆ ಗುರಿ ತಲುಪುವುದು ಬಹಳ ಕಷ್ಟದಾಯಕ ಎಂದು ನಿವೃತ್ತ ಪಾಧ್ಯಾಪಕರು, ಸಾಹಿತಿ ಹಾಗೂ ಕಲಾವಿದರಾದ ಡಾ. ಅಹಲ್ಯಾ ಚಿಂತಾಮಣಿ ಅವರು ಹೇಳಿದರು. ಶಿಕ್ಷಕರ ದಿನಾಚರಣೆಯ ಅಂಗವಾಗಿ ಗುರು ಪರಂಪರೆಯನ್ನು ಗೌರವಿಸುವ ಪ್ರಯುಕ್ತ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು (ರಿ.) ದೆಹಲಿ ಘಟಕದ ವತಿಯಿಂದ ಚಿರಾಗ್ ದೆಹಲಿಯ ಮಸ್ಜಿದ್ ಮೋಡ್‌ದಲ್ಲಿ ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಗುರುವಂದನೆ ಸ್ವೀಕರಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯೊಂದಿಗೆ ಒಳ್ಳೆಯ ಸಂಸ್ಕಾರ ನೀಡಿ ಸಮಾಜದ ಸತ್ಪ್ರಜೆಯನ್ನಾಗಿ ಮಾಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ವಿದ್ಯಾರ್ಥಿಗಳ ಪ್ರತಿಭೆಗೆ ಸೂಕ್ತ ವೇದಿಕೆ ಕಲ್ಪಿಸಿ, ಮಾರ್ಗದರ್ಶನ ಮಾಡುವ ಶಿಕ್ಷಕರ ಕಾರ್ಯ ಪವಿತ್ರವಾದುದು. ಹಾಗೆಯೇ ವಿದ್ಯಾರ್ಥಿಗಳು ಕೂಡ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ಆಸಕ್ತಿವಹಿಸಿ ಅರ್ಥಪೂರ್ಣ ಬದುಕನ್ನು ರೂಪಿಸಿಕೊಳ್ಳಬೇಕು ಎಂದರು. ತಮ್ಮ ಪ್ರಾಧ್ಯಾಪಕ ವೃತ್ತಿ ಜೀವನದ ಅನುಭವವನ್ನು ಹಂಚಿಕೊಂಡರು.

ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿತು. ಕು। ಅಭಿಷೇಕ್ ಉಬಾಳೆ, ಕು। ರೋಹನ್ ಆಶಯ ಗೀತೆಯನ್ನು ಹಾಡಿದರು. ಕು। ಸುಮಂತ್, ಕು। ಕುಶಾಲ್, ಕು। ಸೌರಭ್ ಕುರ್ಮೋಳಿ, ಕು। ಆಶಾ, ಕು। ಸಾತ್ವಿಕ್ ಎಚ್. ತೇಲಿ ಶಿಕ್ಷಕರ ಕುರಿತ ಕವಿತೆ ವಾಚಿಸಿದರು. ಕು। ಮನೋಹರ 'ನಮ್ಮ ಆದರ್ಶ ನಮ್ಮ ಶಿಕ್ಷಕರು' ಕುರಿತು ಮಾತನಾಡಿದರು.

ದೆಹಲಿ ಘಟಕದ ಅಧ್ಯಕ್ಷ ಅರವಿಂದ ಬಿಜ್ಜೈ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಗಣೇಶ ಹೆಗಡೆ, ಖಜಾಂಚಿ ಅಮರೇಶ, ಸಂಚಾಲಕ



ಕೃಷ್ಣರಾಜ್, ಕೇಂದ್ರ ಘಟಕದ ನಿರ್ದೇಶಕ ಅರುಣ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಕಟನಾ ವಿಭಾಗದ ಡಾ. ಷಣ್ಮುಖಾನಂದ ಉಪಸ್ಥಿತರಿದ್ದರು. ಕಾರ್ಯಕ್ರಮ ಸಂಯೋಜಕಿ ರೇಖಾ ಐ. ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೇಮಲತಾ ಸ್ವಾಗತಿಸಿದರು. ಮಾಲಿನಿ ಪ್ರಹ್ಲಾದ್ ವಂದಿಸಿದರು. ಲಾವಣ್ಯ ಬಸವರಾಜು ನಿರೂಪಿಸಿದರು.

**ಅರವಿಂದ ಬಿಜ್ಜೈ**

# ಕ್ಷಮಾಗುಣದ ನೆಲ್ಸನ್ ಮಂಡೇಲಾ



ಮಕ್ಕಳೇ, ಒಬ್ಬ ವ್ಯಕ್ತಿ ಜೀವನದಲ್ಲಿ ಅತ್ಯುನ್ನತ ಸ್ಥಾನ ಪಡೆಯ ಬೇಕಾದರೆ, ಬಹಳ ಕಷ್ಟ, ವಿಪರೀತ ನೋವು, ಮತ್ತು ಧೃಡವಾದ ವಿಶ್ವಾಸದಿಂದ ಇರ ಬೇಕಾಗುತ್ತದೆ. ಅಂತಹ ವ್ಯಕ್ತಿಗಳಲ್ಲಿ ದಕ್ಷಿಣ ಆಫ್ರಿಕಾದ ಅಧ್ಯಕ್ಷ ನೆಲ್ಸನ್ ಮಂಡೇಲಾ ಕೂಡ ಒಬ್ಬರು. ಅವರ ಜೀವನದಲ್ಲಿ ನಡೆದ ಒಂದು ಘಟನೆಯನ್ನು ಚಿಕ್ಕ ಕಥೆಯ ರೂಪದಲ್ಲಿ ಹೇಳುತ್ತೇನೆ.

ನೆಲ್ಸನ್ ಮಂಡೇಲಾ ದಕ್ಷಿಣ ಆಫ್ರಿಕಾ ದೇಶಕ್ಕೆ ಮೊದಲನೆಯ ಸಲ ರಾಷ್ಟ್ರಪತಿ ಆದ ನಂತರ, ತನ್ನ ಸುರಕ್ಷೆಯ ಸೈನಿಕರ ಜೊತೆಯಲ್ಲಿ ಒಂದು ಹೋಟೆಲಿಗೆ ಊಟ ಮಾಡುವುದಕ್ಕೆ ಹೋಗಿದ್ದರು. ಎಲ್ಲರೂ ತಮಗೆ ಇಷ್ಟವಾದ ಊಟವನ್ನು ಆರ್ಡರ್ ಮಾಡಿ ಊಟಕ್ಕೆ ಎದುರು ನೋಡುತ್ತಿದ್ದರು. ಅದೆ ಸಮಯದಲ್ಲಿ ಮಂಡೇಲಾ ಅವರ ಕುರ್ಚಿಯ ಎದುರುಗಡೆ ಒಬ್ಬ ವ್ಯಕ್ತಿ ಊಟಕ್ಕೆ ಅಪ್ಪಣೆ ಕೊಟ್ಟು ಊಟಕ್ಕೋಸ್ಕರ ಎದುರು ನೋಡುತ್ತಿದ್ದನು. ನೆಲ್ಸನ್ ಮಂಡೇಲಾರವರು ತನ್ನ ಸುರಕ್ಷೆಯ ಸೈನಿಕರಿಗೆ ಈ ರೀತಿ ಹೇಳಿದರು; 'ಆ ವ್ಯಕ್ತಿಯನ್ನು ಕರೆಯಿರಿ, ಇಲ್ಲಿ ನನ್ನ ಟೇಬಲ್ ಬಳಿಯಲ್ಲಿಯೇ ಕುಳಿತುಕೊಳ್ಳಲಿ'. ಆ ವ್ಯಕ್ತಿ ಬಂದು ನೆಲ್ಸನ್ ಮಂಡೇಲಾರವರ ಟೇಬಲ್‌ನಲ್ಲಿಯೇ ಕುಳಿತುಕೊಂಡನು. ಎಲ್ಲರೂ ಊಟ ಮಾಡಲು ಶುರು ಮಾಡಿದರು. ಆ ವ್ಯಕ್ತಿಯೂ ಕೂಡ ಊಟ ಮಾಡಲು ಶುರು ಮಾಡಿದನು. ಆದರೆ ಆ ವ್ಯಕ್ತಿಯ ಕೈಗಳು ನಡುಗುತ್ತಿದ್ದವು. ಬೇಗನೆ ಊಟ ಮಾಡಿ ಆ ವ್ಯಕ್ತಿ ತಲೆ ಬಗ್ಗಿಸಿಕೊಂಡು ಆ ಹೋಟೆಲ್‌ನಿಂದ ಹೊರಗಡೆ ಹೋದನು.

ಆ ವ್ಯಕ್ತಿ ಹೊರಗಡೆ ಹೋದ ನಂತರ ಮಂಡೇಲಾ ಅವರ ಸುರಕ್ಷೆಯ ಅಧಿಕಾರಿ ಮಂಡೇಲಾರನ್ನು ಕೇಳಿದನು; 'ಸರ್ ಆತನಿಗೆ ಜ್ವರ ಬಂದಿರಬಹುದು, ಹಾಗಾಗಿ ಊಟ ಮಾಡುವಾಗ ಅವರ ಕೈಗಳು ನಡುಗುತ್ತಿದ್ದವು'. ನೆಲ್ಸನ್ ಮಂಡೇಲಾ ನಸು ನಗುತ್ತಾ ಹೇಳಿದರು. ಆ ವ್ಯಕ್ತಿ ಆರೋಗ್ಯವಾಗಿಯೇ ಇದ್ದಾನೆ, ರೋಗಗ್ರಸ್ತನಲ್ಲ. ನಾನು ಯಾವ ಜೈಲಿನಲ್ಲಿ ಬಂಧಿಯಾಗಿದ್ದನೋ, ಆ ಜೈಲಿನ ಜೈಲರ್ ಆಗಿದ್ದನು ಆ ವ್ಯಕ್ತಿ. ನನಗೆ ಬಹಳ ಹಿಂಸೆ ಕೊಟ್ಟಿದ್ದನು. 'ಏಟು ತಿಂದೂ ತಿಂದೂ ಸುಸ್ತಾಗಿ ನೀರು ಕೇಳಿದಾಗ, ಆ ವ್ಯಕ್ತಿ ನೀರು ಬೇಕಾ ಕುಡಿ' ಎಂದು, ನನ್ನ ಮುಖದ ಮೇಲೆ ಮೂತ್ರ ಮಾಡುತ್ತಿದ್ದನು. ಈಗ ನಾನು ರಾಷ್ಟ್ರಪತಿ ಆಗಿದ್ದೇನೆ? ಆ ವ್ಯಕ್ತಿಗೆ ಮನವರಿಕೆ ಆಗಿದೆ. ತಾನು ಮಾಡಿದ ಕೆಲಸಕ್ಕೆ ಈಗ ತನಗೆ ಭಯಂಕರ ಶಿಕ್ಷೆ ಆಗಬಹುದು ಎಂದು.

ಆದರೆ ಅದು ನನ್ನ ಸಂಸ್ಕಾರವಲ್ಲ. ನನಗೆ ಅನಿಸುತ್ತದೆ ದ್ವೇಷದ ಭಾವನೆಯಿಂದ ಕೆಲಸ ಮಾಡಿದರೆ ಅದು ವಿನಾಶಕ್ಕೆ ದಾರಿ ಮಾಡಿ ಕೊಡುತ್ತದೆ. ಧೈರ್ಯ ಮತ್ತು ಸಹಿಷ್ಣುತೆ ಇದ್ದರೆ ಮಾನಸಿಕ ಪರಿಪಕ್ವತೆ ಪೂರ್ಣವಾಗಿ ಸಾಧಿಸುತ್ತದೆ. ನೋಡಿ ಎಂತಹ ವ್ಯಕ್ತಿತ್ವ ನೆಲ್ಸನ್ ಮಂಡೇಲಾರದ್ದು. ಮಹಾನ್ ವ್ಯಕ್ತಿಗಳ ಈ ತರಹದ ಕ್ಷಮಾ ಗುಣ, ಉದಾರತೆಗಳೇ ಅವರನ್ನು ಆ ಮೇರುತನಕ್ಕೆ ಕೊಂಡೊಯ್ಯುವವು ಅಲ್ಲವೆ?.

**ಚಂದ್ರಶೇಖರ ಜೋಳದರಾಶಿ**

# ಗುರುಗಾಂವ್‌ನಲ್ಲಿ ಶಿಕ್ಷಕರ ಮತ್ತು ಇಂಜಿನಿಯರುಗಳ ದಿನಾಚರಣೆ

ಶಿಕ್ಷಕರ ಮತ್ತು ಇಂಜನಿಯರುಗಳ ಸರ್. ಎಂ. ವಿಶ್ವೇಶ್ವರಯ್ಯ ಅವರ ಜನ್ಮ ದಿನಾಚರಣೆ) ದಿನಾಚರಣೆ ಸೆಪ್ಟೆಂಬರ್ ತಿಂಗಳಲ್ಲಿ ಸಂಭ್ರಮ ಮತ್ತು ಸಂತೋಷದಿಂದ ಆಚರಿಸಲಾಗುತ್ತಿದೆ. ಇಂದಿನ ಹೊಸ ಜನಾಂಗದ ಕನ್ನಡ ಮಕ್ಕಳಿಗೆ ದೇಶ ಕಂಡ ಎರಡು ಭಾರತ ರತ್ನಗಳು ಡಾ. ಸರ್ವಪಲ್ಲಿ, ರಾಧಾಕೃಷ್ಣನ್ (ಮಾಜಿ ರಾಷ್ಟ್ರಪತಿ) ಮತ್ತು ಸರ್.ಎಂ. ವಿಶ್ವೇಶ್ವರಯ್ಯ (ದೇಶ ಕಂಡ ಅದ್ಭುತ ಇಂಜನಿಯರ್) ಅವರ ಜನ್ಮ ದಿನಾಚರಣೆಯನ್ನು ದಿನಾಂಕ 22-09-2019 ರಂದು ಕನ್ನಡ ಕಲಿಕಾ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯದರ್ಶಿ ಎಂ. ಕೃಷ್ಣಪ್ಪ ಮಾತನಾಡಿ ಡಾ. ಸರ್ವಪಲ್ಲಿ ರಾಧಾಕೃಷ್ಣ ಮತ್ತು ಸರ್.ಎಂ. ವಿಶ್ವೇಶ್ವರಯ್ಯ ಅವರ ಜೀವನದ ಬಗ್ಗೆ, ಸಂಕ್ಷಿಪ್ತವಾಗಿ ಮಕ್ಕಳಿಗೆ ತಿಳಿಸಿದರು.

ನಂತರ ಕನ್ನಡ ಕಲಿಕಾ ಕೇಂದ್ರದ ಶಿಕ್ಷಕರಾದ ಅರವಿಂದ ಬಿಜ್ಜೆ ಅವರು ಬರೆದ ಪ್ರಾರ್ಥನೆ ಗೀತೆ ಕರವ ಮುಗಿದು ಗುರುವಿಗೆ ಶರಣು ಗೀತೆಯನ್ನು ಕನ್ನಡ ಕಲಿಕಾ ಕೇಂದ್ರದ ಮಕ್ಕಳು ಇಂಪಾಗಿ ಭಕ್ತಿ ಮತ್ತು ಶ್ರದ್ಧೆಯಿಂದ ಹಾಡಿದರು.




ನಂತರ ಶಿಕ್ಷಕಿ ಶ್ರೀಮತಿ ಸುಜಾತ ನಿಂಬಾಲ್ ಅವರು ಮಾತನಾಡಿ ಶಿಕ್ಷಕರ ದಿನ ಮತ್ತು ಸರ್.ಎಂ. ವಿಶ್ವೇಶ್ವರಯ್ಯ ಅವರ ಜೀವನದ ಘಟನೆಗಳನ್ನು ಮಕ್ಕಳಿಗೆ ವಿವರಿಸಿದರು. ನಂತರ ಮಕ್ಕಳಿಂದ ಈ ಇಬ್ಬರು ಮಹಾನ್ ವ್ಯಕ್ತಿಗಳು ಯಶಸ್ವಿಯ ಶಿಖರವನ್ನು ಹೇರಲು ಪಟ್ಟ ಕಷ್ಟಗಳು, ಅನುಭವಿಸಿದ ನೋವುಗಳು, ಸಹಿಸದ ಅವಮಾನಗಳ ಬಗ್ಗೆ ಚಿಕ್ಕ, ಚಿಕ್ಕ ಮಾಹಿತಿಯನ್ನು ಬರೆದು ಕನ್ನಡ ಕಲಿಕೆ ಕೇಂದ್ರದ ಮಕ್ಕಳ ಭಾಷಣದ ಮುಖಾಂತರ ತಿಳಿಸಿದರು. ಈ ಸ್ಪೂರ್ತಿಮಯ ಕಾರ್ಯಕ್ರಮದಲ್ಲಿ, ಅಧ್ಯಕ್ಷ ಸಾಯಿಪ್ರಸಾದ್ ಹೆರಾಂಜಲ್, ಖಜಾಂಚಿ, ಮರಿಬಸಪ್ಪ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಕನ್ನಡ ಕಲಿಕಾ ಕೇಂದ್ರದ ಮಕ್ಕಳು ಪೋಷಕರು ಭಾಗವಹಿಸಿದ್ದರು.

**ಚಂದ್ರಶೇಖರ ಜೋಳದರಾಶಿ**

# ಗಣೇಶೋತ್ಸವ ಮತ್ತು ಜಿಮ್ ಕೇಂದ್ರದ ಶುಭಾರಂಭ

ಕರ್ನಾಟಕದ ಪ್ರತಿ ಜಿಲ್ಲೆಯ ಪ್ರತಿ ತಾಲೂಕಿನ ಪ್ರತಿ ಹಳ್ಳಿಯ ಸಂಸ್ಕೃತಿಗಳು ಹೆಜ್ಜೆ ಹೆಜ್ಜೆಗೆ ಬದಲಾವಣೆಗಳನ್ನು ಸಾರ್ವಜನಿಕವಾಗಿ ಆಚರಿಸುವ ಗಣೇಶನ ಹಬ್ಬ ಹರಿದಿನಗಳಲ್ಲಿ ನಾವು ಹೊರನಾಡಲ್ಲಿ ಮಾತ್ರ ಕಾಣಬಹುದಾಗಿರುತ್ತದೆ. ವರುಷಕ್ಕೆ ಒಂದು ಬಾರಿ ಆಚರಣೆಯಾಗುವ ಗಣೇಶನ ಬಗ್ಗೆ ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದ್ದರೂ ಇದು ಇಂದಿನ ಪ್ರಗತಿಶೀಲ ಶರವೇಗದಲ್ಲಿ ಚಲಿಸುತ್ತಿರುವ ಜೀವನ ಶೈಲಿಯಲ್ಲಿ ಒಂದೆಡೆ ಸೇರುವುದೇ ವಿಶೇಷವಾಗಿ ಬಿಟ್ಟಿದೆ. ಗಣೇಶನ ಚತುರ್ಥಿ ನೆಪದಲ್ಲಾದರೂ ಜಾತಿ-ಬೇಧ, ಧರ್ಮ, ಮತ ಪಂಥಗಳನ್ನು ಮರೆತು ಒಂದೆಡೆ ಸೇರಿಸುವ ಕಾರ್ಯವನ್ನು ದಿನಾಂಕ 02.09.2019ರಂದು ನವದೆಹಲಿಯ  ಕರ್ನಾಟಕ ಭವನದ ವಸತಿ ಗೃಹವಾದ ಆರ್.ಕೆ. ಪುರಂ ಸೆಕ್ಟರ್-6, 1ನೇ ಹಂತ ಹಾಗೂ 2ನೇ ಹಂತದಲ್ಲಿ ಕರ್ನಾಟಕ ಭವನದ ನೌಕರರು ಹಾಗೂ ಕುಟುಂಬ ವರ್ಗದವರು ಸೇರಿ ವಿಜೃಂಭಣೆಯಿಂದ ಆಚರಿಸಿ ಗಂಡು ಹೆಣ್ಣು ಎಂಬ ಬೇಧ ಭಾವನ್ನು ಮರೆತು ಸಂತಸಪಟ್ಟರು ಎಂಬುದಕ್ಕೆ ಗಣೇಶ ಚತುರ್ಥಿ ಸಾಕ್ಷಿಯಾಯಿತು.

ಇದೇ ಸಂದರ್ಭದಲ್ಲಿ ಆರ್.ಕೆ. ಪುರಂ ಎರಡನೇ ಹಂತದಲ್ಲಿ ಸ್ಥಳೀಯ ಆಮ್ ಆದ್ಮಿ ಪಕ್ಷದ ಶಾಸಕಿ ಶ್ರೀಮತಿ ಪ್ರಮೀಳ ಠೊಕಸ್ ಪ್ರತಿ ವರ್ಷದಂತೆ ಈ ವರ್ಷವು ಗಣೇಶನ ಪೂಜೆಯಲ್ಲಿ ಭಾಗವಹಿ ಎಲ್ಲರಿಗೂ ಶುಭಕೋರಿದರು ಹಾಗೂ ಶಾಸಕರ ನಿಧಿಯಿಂದ ಕರ್ನಾಟಕ ಭವನದ ವಸತಿಗೃಹದ ಕಾಪೌಂಡ್ ನಲ್ಲಿ ಸ್ಥಾಪಿತವಾಗಿರುವ ಜಿಮ್ ಕಾರ್ಯಗಾರವನ್ನು ಸಹ ವಿದ್ಯುಕ್ತವಾಗಿ ಉದ್ಘಾಟಿಸಿದರು.



ವಲಯ-2ರ ಗಣೇಶನ ಮೂರ್ತಿ

ಅಂದೇ ಸಂಜೆ ಭಕ್ತಿಗೀತಗಾಯನದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ಭವನದ ವಸತಿ ಗೃಹದ ಸಮುಚ್ಚಯದ ಗೃಹಿಣಿಯರಿಗೆ ಮೂರು ದಿನದ ಅಡುಗೆ ರಜೆಯು ಸಹ ಘೋಷಣೆಯಾಗಿತ್ತು!



ಈ ಬಾರಿ ದೆಹಲಿ ಸರ್ಕಾರ ಪ್ರತಿ ಸೆಕ್ಟರ್‌ನಲ್ಲಿ ಗಣೇಶನ ವಿರ್ಜನೆಗಾಗಿ ಹೊಂಡಗಳನ್ನು ನಿರ್ಮಿಸಿ ಅದಕ್ಕೆ ನೀರು ಹಾಯಿಸಿ ಗಣೇಶನ ವಿರ್ಜನೆಗೆ ಒಳ್ಳೆಯ ಪರಿಸರವನ್ನು ನಿರ್ಮಿಸಿಕೊಟ್ಟಿರುವುದಕ್ಕೆ ದೆಹಲಿ ಸರ್ಕಾರವನ್ನು ನಾವು ಅಭಿನಂದಿಸಲೇಬೇಕು. ಪ್ರತಿ ವರ್ಷ ದೆಹಲಿನಗರದ ಎಲ್ಲಾ ಕೊಳೆ ನೀರು ತುಂಬುವ ಯಮುನ ನದಿಯಲ್ಲಿ ವಿಸರ್ಜನೆ ಮಾಡುತ್ತಿದ್ದೆವು ಇದರಿಂದ ಮುಕ್ತಿ ಸಿಕ್ಕಹಾಗೆ ಆಯಿತು.

ಒಂದನೇ ಹಂತದಲ್ಲಿ ರೇಣುಕುಮಾರ್ ಮತ್ತು ಎರಡನೇ ಹಂತದಲ್ಲಿ ತ್ಯಾಗೇಶ್ ಮೂರ್ತಿ ಇವರ ಸಾರಥ್ಯದಲ್ಲಿ ಗಣೇಶ ಚತುರ್ಥಿ ಹಬ್ಬವನ್ನು ನಿರ್ವಿಘ್ನವಾಗಿ ನೇರವೇರಿಸಲಾಯಿತು.

**ಎಸ್. ಕುಮಾರ್**

# ದೆಹಲಿ ಪೋಲೀಸ್ ಕನ್ನಡಿಗರಿಂದ ಗಣೇಶೋತ್ಸವ





ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ ಗಣೇಶ ಹಬ್ಬವನ್ನು ದಿನಾಂಕ 6/9/19 ರಂದು ಪ್ರತಿಷ್ಠಾಪನೆ ಮಾಡಿ, 8/9/19 ರಂದು ವಿಸರ್ಜನೆ ಮಾಡಲಾಯಿತು. 8ನೇ ತಾರೀಖು ಬೆಳಗ್ಗೆಯಿಂದ ಹೋಮ ಹಾಗೂ ಪೂಜೆಯಿಂದ ಶುರುವಾಯಿತು, ನಂತರ ಪೂಜಾ ಕಾರ್ಯಕ್ರಮಗಳಿಗೆ ಸಹಕರಿಸಿದ ಎಲ್ಲಾ ಸ್ನೇಹಿತರನ್ನು ಅಭಿನಂದಿಸಲಾಯಿತು. ಸಹೋದ್ಯೋಗಿ ಪಳನಿಯವರು ಕನ್ಯಾಕುಮಾರಿಯಿಂದ ಲದ್ದಾಕ್‌ವರೆಗೆ ಸೈಕಲ್ ಪ್ರಯಾಣ ಮಾಡಿ ಬಂದಿರುವ ಅವರ ಸಾಧನೆಗೆ ಸಮಿತಿ ಅಭಿನಂದಿಸಿತು. ಸದಸ್ಯೆ ಶ್ರೀಮತಿ ಪಾರ್ವತಮ್ಮ ಸತ್ಯಪ್ಪನವರು ದೆಹಲಿ ಪೋಲೀಸ್‌ನಿಂದ ತಾತ್ಕಾಲಿಕವಾಗಿ ಸಿ.ಬಿ.ಐ.ಗೆ ಬೆಂಗಳೂರಿಗೆ ವರ್ಗಾವಣೆ ಆಗಿರುವುದರಿಂದ ಅವರನ್ನು ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಡಲಾಯಿತು.

ಕಾರ್ಯಕ್ರಮಕ್ಕೆ ಸಹಕರಿಸಿದ ಅಶೋಕ ವಿಹಾರ್‌ನ ಜಿತೇಂದ್ರ ಕುಮಾರ್, ಹೆಚ್. ಕೆ. ಮಂಜುನಾಥ, ಪಾರ್ವತಮ್ಮ, ಪಳನಿ, ಪುರುಷೋತ್ತಮ, ಲವ, ರಾಜಪ್ಪ, ನಂಜುಂಡಯ್ಯ, ವಿಜಯಕುಮಾರ್, ಕೆ.ಜೆ. ಮಂಜುನಾಥ ಹಾಗೂ ಎಸ್.ಡಿ. ಶ್ರೀನಿವಾಸ, ಹೆಚ್. ಶಿವರಾಮು, ಪುರೋಹಿತರ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ರಾಜಕುಮಾರ್ ಜಿ, ಹಾಗೂ ಐ ಬಿ  ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿರುವ ಆರ್.ಎ. ವೆಂಕಟೇಶ ಹಾಗೂ ಇನ್ನಿತರ ಸದಸ್ಯರುಗಳನ್ನು ಅಭಿನಂದಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಮತ್ತು ಕಾರ್ಯದರ್ಶಿ ಸಿ.ಎಂ. ನಾಗರಾಜ, ಕರ್ನಾಟಕ ಭವನದ ರೇಣುಕುಮಾರ್ ಅವರನ್ನು ಸಮಿತಿಯ ಹಿರಿಯ ಸದಸ್ಯರಾದ ಕೆ.ಪಿ. ನಾಗರಾಜು, ಆರ್.ಟಿ. ನಾರಾಯಣ, ಆಶಾಮಹದೇವ ಅವರು ಅಭಿನಂದಿಸಿದರು.

ನಂತರ ಗಣೇಶನ ಪೂಜೆಮಾಡಿ ಹಿರಿಯರು ಕಿರಿಯರು ಬಹಳ ಹರ್ಷೋಲ್ಲಾಸದಿಂದ ಕುಣಿದು ಕುಪ್ಪಳಿಸಿ, ವಿಘ್ನೇಶ್ವರನನ್ನು ವಿಸರ್ಜನೆ ಮಾಡಿದರು.

**ಆರ್. ಮಹದೇವ**

# ಗುರುಗಾಂವ್ ಕನ್ನಡ ಸಂಘದಲ್ಲಿ ಗಣೇಶೋತ್ಸವ



ಪ್ರತಿ ವರ್ಷದಂತೆ ಈ ವರ್ಷವೂ ಗುರುಗಾಂವ್ ನಗರದ ಶ್ರೀ ರಾಧ ಕೃಷ್ಣ ದೇವಾಲಯದಲ್ಲಿ ಭಕ್ತಿ, ಸಂಭ್ರಮ, ಸಂತೋಷದಿಂದ ಗಣೇಶ ಹಬ್ಬವನ್ನು ಆಚರಿಸಲಾಯಿತು. ಗುರುಗಾಂವ್ ಕನ್ನಡ ಸಂಘವು ಕಳೆದ 22 ವರ್ಷಗಳಿಂದ ವಿಭಿನ್ನ ರೀತಿಯಲ್ಲಿ ಗಣೇಶ ಹಬ್ಬವನ್ನು ಆಚರಿಸಿಕೊಂಡು ಬರುತ್ತಿದೆ. ದಿನಾಂಕ 02-09-2019 ಬೆಳಗ್ಗೆ 10 ಗಂಟೆಗೆ ಗುರುಗಾಂವ್ ಕನ್ನಡ ಸಂಘದ ಎಲ್ಲ ಕನ್ನಡಿಗರು ಪರಿವಾರ ಸಮೇತ. ಪ್ರಥಮ ವಂದಿತ, ವಿಘ್ನ ಹರ, ಗಣಗಳ ಅಧೀಶ್ವರ, ಆದಿ ಪೂಜಿತ, ಬುದ್ಧಿ ಪ್ರದಾಯಕ, ಸಿದ್ಧಿ ದಾಯಕ, ಚಿಣ್ಣರ ಪ್ರೀತಿಯ ದೇವ, ಮೋದಕ-ಗರಿಕೆ ಪ್ರಿಯ- ಹೀಗೆ 108 ಹೆಸರುಗಳಿಂದ ಕರೆಸಿಕೊಳ್ಳುವ ಶ್ರೀ ಗಣೇಶನನ್ನು ಪ್ರತಿಷ್ಠಾಪಿಸಿ ಪೂಜೆಯನ್ನು ಶ್ರೀ ಶೃಂಗೇರಿ ಮಠದ ಪೂಜಾರಿಗಳು ಮಂತ್ರಗಳನ್ನು ಪಠಿಸುತ್ತಿದ್ದಂತೆ ಶ್ರೀ ಮತ್ತು ಶ್ರೀಮತಿ ಅರವಿಂದ ಗುಣಾರಿ ದಂಪತಿಗಳು ನೆರವೇರಿಸಿದರು.

ಯಾವುದೇ ರಾಸಾಯನಿಕ ಬಣ್ಣವನ್ನು ಬಳಸದೇ ಜೇಡಿ ಮಣ್ಣಿನಿಂದ ನಿರ್ಮಿಸಿದ್ದ ಸಿಂಹಾಸನ ಮೇಲೆ ಕುಳಿತಿದ್ದ ಗಣಪನ ಮೂರ್ತಿಯನ್ನು ಪ್ರತಿಷ್ಠಾಪಿಸುವ ಮೂಲಕ ಪರಿಸರ ಸ್ನೇಹಿ ಹಬ್ಬವನ್ನು ಗಣೇಶ ಚತುರ್ಥಿಗೆ ಗುರುಗಾಂವ್ ಕನ್ನಡ ಸಂಘದ ಪರಿವಾರಕ ಸದಸ್ಯರು ವಿದ್ಯುತ್ ಚಾಲನೆ ನೀಡಿದರು. ಸಾಂಪ್ರದಾಯಿಕ ಉಡುಗೆಯಲ್ಲಿ ಎಲ್ಲ ಗುರುಗಾಂವ್ ಕನ್ನಡಿಗರು ಸಂಭ್ರಮ ಸಡಗರದಿಂದ ಪಾಲ್ಗೊಂಡಿದ್ದರು. ಇದೇ ಸಾಯಂಕಾಲ ಶ್ರೀ ಮತ್ತು ಶ್ರೀಮತಿ ಶಾಂತಕುಮಾರ್ ನಿಂಬಾಳ್ ದಂಪತಿಗಳು ಸಾಯಂಕಾಲದ ಪೂಜೆಯನ್ನು ನೆರವೇರಿಸಿದರು. ಅದಕ್ಕೆ ಮುನ್ನ ಗುರುಗಾಂವ್ ಕನ್ನಡ ಸಂಘದಿಂದ ಕರ್ನಾಟಕ ರಾಜ್ಯ ನೆರೆ ಪ್ರವಾಹ ಪೀಡಿತರಿಗೆ ದಾನಿಗಳಿಂದ ಪರಿಹಾರ ಧನವನ್ನು ಸಂಗ್ರಹಿಸಲು ಹುಂಡಿಯನ್ನು ಏರ್ಪಾಡು ಮಾಡಿದ್ದರು.

ನಂತರ ಆರ್.ಕೆ. ಕ್ಯಾಂಟರ್ಸ್ ಅವರು ಮಹಾ ಪ್ರಸಾದವನ್ನು ಹಂಚಿದರು. ಶ್ರೀ ಮಹಾದೇವ ಮತ್ತು ಶ್ರೀಮತಿ ಆಶಾಲತಾ (ದೆಹಲಿ ಕರ್ನಾಟಕ ಸಂಘದ ಖಜಾಂಚಿಗಳು) ದಂಪತಿಗಳು ಭಾಗವಹಿಸಿದ್ದರು.

ಮಂಗಳವಾರ : ಶ್ರೀ ಅರವಿಂದ ಬಾಬು ಶ್ರೀ ಸಾಬು ದಂಪತಿಗಳು ಪೂಜೆಯನ್ನು ನೆರವೇರಿಸಿದರು. ಮಹಾ ಪ್ರಸಾದವನ್ನು ಗುರುಗಾಂವ್ ಕನ್ನಡಿಗರು (ಪ್ರಾಯೋಜಕರು ಶ್ರೀ ವಿ.ವಿ.ಎಸ್.ಎಸ್. ಶರ್ಮಾ ಅವರು) ಮಾಡಿದ್ದರು.

ಬುಧವಾರದ ಪೂಜೆಯನ್ನು ಶ್ರೀ ರಂಗನಾಥ ದಂಪತಿಗಳು ಶ್ರೀ ಸಾಯಿಪ್ರಸಾದ ದಂಪತಿಗಳು ನೆರವೇರಿಸಿದರು. ನಗರದ ಪ್ರಖ್ಯಾತ ಇ.ಎನ್.ಟಿ ವೈದ್ಯರು ಉಚಿತವಾಗಿ ವೈದ್ಯಕೀಯ ತಪಾಸಣೆ ಮಾಡಿದರು. ಮಹಾ ಪ್ರಸಾದ ಪ್ರಾಯೋಜಕರು ಶ್ರೀ ಕೆ. ರಾಜೇಶ್ ಸರ್ ಅವರು.

ಗುರುವಾರ ಪೂಜೆಯನ್ನು ಶ್ರೀ ಬಸವರಾಜ ದೇಸುರು ದಂಪತಿಗಳು ಮತ್ತು ಶ್ರೀ ರಾಜೇಶ್ ದಂಪತಿಗಳು ನೆರವೇರಿಸಿದರು. ಮಹಾ ಪ್ರಸಾದ ವನ್ನು ಆರ್.ಕೆ. ಕ್ಯಾಂಟರ್ಸ್ ಮತ್ತು ಗುರುಗಾಂವ್ ಕನ್ನಡ ಸಂಘ ಪ್ರಾಂಗಣದಲ್ಲಿ ಸೇರಿದ ದಂಪತಿಗಳಿಗೆ ಹಂಚಿದರು.

ಶುಕ್ರವಾರದ ಪೂಜೆಯನ್ನು ಶ್ರೀ ವಸಂತ ರಾವ್ ದಂಪತಿಗಳು ಮತ್ತು ಶ್ರೀ ಗೋಪಾಲ ತಲ್ವಾರ್ ದಂಪತಿಗಳು ನೆರವೇರಿಸಿದರು. ಸ್ಥಳೀಯ ಶಾಸ್ತ್ರೀಯ ಸಂಗೀತ ತಂಡ ಡಿ.ಜೆ. ಗ್ರೂಪ್ ಅವರು ಅದ್ಭುತವಾಗಿ ನಡೆಸಿಕೊಟ್ಟರು. ಡಾ. ರಂಗನಾಥ್ ಸಿಂಗಾರಿ ತಂಡ ಉಚಿತ ದಂತ ವೈದ್ಯಕೀಯ ತಪಾಸಣೆ ಆಯೋಜಿಸಿದ್ದರು. ಮಹಾ ಪ್ರಸಾದದ ಆಯೋಜಕರು ಶ್ರೀ ಪ್ರಸನ್ನ ಬಂಟ್ವಾಳ ಅವರು.

ಶನಿವಾರದ ಪೂಜೆಯನ್ನು ಶ್ರೀ ಮತ್ತು ಶ್ರೀಮತಿ ಲಕ್ಷ್ಮೀಕಾಂತ ಮೋರೆಗೌಡ ಶ್ರೀ ನಾಗಭೂಷಣ ದಂಪತಿಗಳು ನೆರವೇರಿಸಿದರು. ಸಂಜೆ ಒಂದು ಸುಂದರ ಕಾರ್ಯಕ್ರಮಗಳಿಗೆ ವೇದಿಕೆ ಆಯಿತು. ಗುರುಗಾಂವ್ ಕನ್ನಡಿಗರ ಎಲ್ಲ ಮಕ್ಕಳು ವಿಭಿನ್ನ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಮಹಾ ಪ್ರಸಾದ ಪ್ರಾಯೋಜಕರು ಹೊಂಡ ಕನ್ನಡಿಗರು. ರಾತ್ರಿ ಸುಮಾರು 450 ಭಕ್ತರು ಸೇರಿದ್ದರು. ದೆಹಲಿ ಕರ್ನಾಟಕ ಸಂಘದ ಪ್ರಧಾನಕಾರ್ಯದರ್ಶಿ ಸಿ.ಎಂ. ನಾಗರಾಜ ಮತ್ತು ಅವರ ಪತ್ನಿ ಶೋಭ ನಾಗರಾಜ್ ನಮ್ಮ ಜೊತೆಯಲ್ಲಿ ಭಾಗಿಯಾಗಿದ್ದರು.

ಭಾನುವಾರ : ವಿಸರ್ಜನೆ ಕಾರ್ಯಕ್ರಮದ ತಯಾರಿಗೆ ರಾತ್ರಿಯಿಂದ ನಮ್ಮ ಮಿತ್ರರು ತಯಾರಿ ನಡೆಸಿದ್ದರು. ಬೆಳಗ್ಗೆ ಅಲಂಕರಿಸಿದ ಟೆಂಪೊ ಗಣೇಶ ವಿಸರ್ಜನೆ ಕಾಯುತ್ತಿತ್ತು. ಪೂಜೆಯನ್ನು ಶೃಂಗೇರಿ ಪೀಠದ ಸ್ವಾಮಿಗಳು ಮಂತ್ರ ಪಠಣಗಳ ನಡುವೆ ಶ್ರೀ ಮತ್ತು ಶ್ರೀಮತಿ ನಾಗೇಶ್ ದಂಪತಿಗಳು ನೆರವೇರಿಸಿದರು. ಬೆಳಗ್ಗೆ ವಿಸರ್ಜನೆ ಪೂಜೆ ನೆರವೇರಿಸಿದ ನಂತರ ಗಣೇಶನನ್ನು ವಿಜೃಂಭಣೆಯಿಂದ ಮೆರವಣಿಗೆ ಮಾಡುತ್ತಾ ಬಸಯ್ ಹಳ್ಳಿಯ ಕೆರೆಯ ಬಳಿ ಶ್ರೀ ಗಣೇಶನಿಗೆ ಪೂಜೆ ನೆರವೇರಿಸಿ ಮಾತೆ ಗಂಗೆಯ ಮಡಿಲಲ್ಲಿ ಬಿಡಲಾಯಿತು. ಸಪ್ತ ದಿನಗಳ ರಾತ್ರಿ ಒಂದು ದಿನವು ಕೂಡ ಭಕ್ತಾದಿಗಳು ಸಂಖ್ಯೆ 250 ಕ್ಕೆ ಕಡಿಮೆ ಆಗಲಿಲ್ಲ ಮಾಡಿದ ಅಡುಗೆ ಒಂದು ದಿನ ವ್ಯರ್ಥ ಆಗಲಿಲ್ಲ. ಏಳು ದಿನಗಳ ಕಾಲದಲ್ಲಿ ಆರ್ಯನ್ ಅನ್ನುವ ಮಗು ಭಕ್ತಾದಿಗಳಿಗೆ ಪ್ರಸಾದ ಹಂಚುವ ರೀತಿಯನ್ನು ಕಂಡು ಎಲ್ಲರೂ ಈ ಬಾಲಕನನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು. ಒಂದು ವಾರ ನಿರಂತರ ಕಠಿಣ ಪರಿಶ್ರಮ ಪಟ್ಟು ಪ್ರತಿಷ್ಠಾಪನೆಯ ಮುಂಚಿನಿಂದ ವಿಸರ್ಜನೆಯವರೆಗೆ ರಾತ್ರಿ ನಿದ್ರೆಯಿಲ್ಲದೆ ಸಮಯಕ್ಕೆ ಸರಿಯಾಗಿ ಎಲ್ಲ ಕೆಲಸವನ್ನು ಮಾಡಿದ ಹೀರೊ, ಹೋಂಡಾ ಮತ್ತು ಎಲ್ಲ ಕನ್ನಡಿಗರು, ಸಪ್ತ ದಿನಗಳು ಅವಿರತ ಪ್ರಯತ್ನ ಪಟ್ಟು ರುಚಿಯಾದ, ಶುಚಿಯಾದ ಮತ್ತು ಆರೋಗ್ಯಕರವಾದ ಆಹಾರವನ್ನು ಸಮಯಕ್ಕೆ ಸರಿಯಾಗಿ ಭಕ್ತಾದಿಗಳಿಗೆ ಪೂರೈಸಿದ ಗುರುಗಾಂವ್ ಕನ್ನಡಿಗರ ಅಹಾರ ಟೀಮ್, ಹಿರಿಯರು, ಹಿತೈಷಿಗಳ ಮಾರ್ಗದರ್ಶನದಲ್ಲಿ ಅತ್ಯದ್ಭುತ ಭಕ್ತಿ ಉತ್ಸವವನ್ನು ನಿರಂತರ ಒಂದು ವಾರಗಳ ಕಾಲ ನಿರ್ವಹಿಸಿದ ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರು ಸಾಯಿ ಪ್ರಸಾದ್ ಹೆರಂಜಾಲ್, ಪ್ರಧಾನ ಕಾರ್ಯದರ್ಶಿ ಎಂ. ಕೃಷ್ಣಪ್ಪ, ಖಜಾಂಚಿ ಎಂ. ಮರಿಬಸಪ್ಪ ಮತ್ತು ಸಮಸ್ತ ಗುರುಗಾಂವ್ ಕನ್ನಡ ಸಂಘದ ಸದಸ್ಯರು ಗಣೇಶೋತ್ಸವವನ್ನು ಯಶಸ್ವಿಗೊಳಿಸಿದ್ದರು.

**ಚಂದ್ರಶೇಖರ ಜೋಳದರಾಶಿ**

# ಅಗಲಿದ ಹಿರಿಯ ಛಾಯಾಗ್ರಾಹಕ ಕೆ. ಶ್ರೀನಿವಾಸ ರಾವ್



ಭಾರತ ಸರಕಾರ ಮಾಹಿತಿ ಮತ್ತು ಪ್ರಸಾರ ಮಂತ್ರಾಲಯದಲ್ಲಿ ಛಾಯಾಗ್ರಾಹಕರಾಗಿ ಸೇವೆ ಸಲ್ಲಿಸಿದ್ದ, ದೆಹಲಿಯ ಹಿರಿಯ ಕನ್ನಡಿಗ ಕೆ. ಶ್ರೀನಿವಾಸ ರಾವ್ (76) ದಿ.28.9.2019 ರಂದು ನಿಧನರಾಗಿದ್ದಾರೆ.

ಕಳೆದ 56 ವರ್ಷಗಳಿಂದ ದೆಹಲಿಯಲ್ಲಿ ನೆಲೆಸಿದ್ದ ಇವರು ಮೂಲತಃ ಕರ್ನಾಟಕದ ಚಾರ್ಮಾಡಿಯವರು. ಅವರು ಪುಣೆಯಲ್ಲಿ ವಿಶೇಷ ತರಬೇತಿ ಪಡೆದಿದ್ದರು. ಸ್ವಾತಂತ್ರ್ಯ ದಿನದಂದು ಇಂಡಿಯಾ ಗೇಟ್ ತುದಿಯೇರಿ ತೆಗೆದ ಚಿತ್ರಗಳೂ ಸೇರಿದಂತೆ ಸರಕಾರದ ಕಾರ್ಯಕ್ರಮಗಳ ಮಹತ್ವದ ಚಿತ್ರಗಳನ್ನು ಅವರು ಸೆರೆ ಹಿಡಿದಿದ್ದರು. ದೆಹಲಿಯ ಕನ್ನಡ ಭಾರತಿ ರಂಗ ಚಟುವಟಿಕೆಯಲ್ಲಿ ಕೆಲಕಾಲ ತೊಡಗಿಸಿಕೊಂಡಿದ್ದರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅವರು ಶ್ರೀನಿವಾಸ್ ರಾವ್ ಅವರ ಅಳಿಯ. ಮೃತರು ಪತ್ನಿ, ಪುತ್ರ, ಪುತ್ರಿ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.ಅಗಲಿದ ಹಿರಿಯ ಚೇತನ ಕೆ. ಶ್ರೀನಿವಾಸ ರಾವ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.



# ಕರ್ನಾಟಕ ಭವನದ ಉದ್ಯೋಗಿ ಜಯಕುಮಾರ್ ನಿಧನ

ದೆಹಲಿ ಕರ್ನಾಟಕ ಭವನದಲ್ಲಿ ಉದ್ಯೋಗಿಯಾಗಿದ್ದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಜಯಕುಮಾರ್ ಅವರು ಅನಾರೋಗ್ಯದಿಂದಾಗಿ ದಿನಾಂಕ 05.09.2019ರಂದು ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ.

ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಕುಟುಂಬದವರಿಗೆ ಅವರ ಅಗಲುವಿಕೆಯನ್ನು ಸಹಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸುತ್ತಾ ದೆಹಲಿ ಕರ್ನಾಟಕ ಸಂಘ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ದೆಹಲಿ ಕರ್ನಾಟಕ ಸಂಘದ ಕ್ಷೇಮಾಭಿವೃದ್ಧಿ ನಿಧಿಯಿಂದ ಅಗಲಿದ ಜಯಕುಮಾರ್ ಕುಟುಂಬಕ್ಕೆ ಅವರಿಗೆ ರೂ. 50,000/- ಸಹಾಯ ಧನವನ್ನು ನೀಡಿ ಸ್ಪಂದಿಸಲಾಗಿದೆ.

## ಉಚಿತ ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಸಲಹೆ 20.10.2019 ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಕುರಿತು ಸಲಹೆ 20.10.2019 ಸಂಜೆ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆ ಕಾಯಿಲೆ ಕುರಿತು ವೈದ್ಯಕೀಯ ಸಲಹೆ 27.10.2019 ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಆಯುರ್ವೇದ ವೈದ್ಯಕೀಯ ಸಲಹೆ 27.10.2019 ಸಂಜೆ 4 ಗಂಟೆಯಿಂದ.

**(ವಿಶೇಷ ಸೂಚನೆ : ವೈದ್ಯರನ್ನು ಸಂಪರ್ಕಿಸುವ ಮೊದಲು ಸಂಘಕ್ಕೆ ದೂರವಾಣಿ ಮುಖಾಂತರ ವೈದ್ಯರ ಉಪಸ್ಥಿತಿಯನ್ನು ಖಚಿತಪಡಿಸಿಕೊಳ್ಳಬೇಕಾಗಿ ವಿನಂತಿ.)**




# ಓದುಗರ ಸ್ಪಂದನ

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ ಆಗಿರುವ ಹಿರಿಯ ಸಾಹಿತಿ ಎನ್.ಪಿ. ಭಟ್ ಅವರು ಧಾರವಾಡದಿಂದ ಕಳಿಸಿದ ಅಭಿಮತ ಕುರಿತ ಮೆಚ್ಚುಗೆ ಪತ್ರ ಇಲ್ಲಿದೆ.

ಶ್ರೀ ಎನ್.ಪಿ. ಭಟ್ ಅವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅಭಿಮತ ಪತ್ರಿಕೆಯ ಆರಂಭ ಆಗಿತ್ತು ಎನ್ನುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಭಿಮತ ಪತ್ರಿಕೆಯ ಮೂವತ್ತನೇ ವರ್ಷದ ಮೊದಲ ಸಂಚಿಕೆ ಹೊರಬರುತ್ತಿರುವ ಈ ಸಂದರ್ಭದಲ್ಲಿ ಈ ಪತ್ರ ನಮ್ಮ ಕೈ ಸೇರಿರುವುದು ನಮಗೆ ಸಂತಸ ನೀಡಿದೆ.

ದೆಹಲಿ ಕರ್ನಾಟಕ ಸಂಘದ ಸರ್ವ ಸದಸ್ಯರಿಗೆ, ಅಭಿಮತದ ಓದುಗರಿಗೆ ಮತ್ತು ಸಮಸ್ತ ಕನ್ನಡಿಗರಿಗೆ ದೀಪಾವಳಿ ಹಬ್ಬದ ಶುಭಾಶಯಗಳು.

*–ಸಂಪಾದಕ*




ಮಾನ್ಯರೇ,

ಇದೀಗ ಸೆಪ್ಟಂಬರ ತಿಂಗಳ ಅಭಿಮತದ ಸಂಚಿಕೆಯು ನನ್ನ ಕೈ ಸೇರಿದೆ. ಓದಿ ನನಗೆ ನಿಜಕ್ಕೂ ಬಹಳ ಸಂತೋಷ ವಾಯಿತು. ಒಂದು ರೀತಿಯಲ್ಲಿ ಈ ಸಂಚಿಕೆಯನ್ನು ವಿಶೇಷ ಸಂಚಿಕೆಯೆಂದು ಭಾವಿಸಬಹುದೇನೋ! ಈ ಸಂಚಿಕೆಯಲ್ಲಿ -ರುವ ಲೇಖನಗಳೆಲ್ಲವೂ ಉತ್ತಮ ಗುಣಮಟ್ಟದ್ದಾಗಿವೆ. ಆದರಲ್ಲೂ ಕೋಟ ಶಿವರಾಂ ಕಾರಂತರ ಕಾದಂಬರಿ "ಅಳಿದ ಮೇಲೆ" ಯ ಬಗ್ಗೆ ಪ್ರೊ.ಮುತಾಲಿಕರು ಬರೆದ ಲೇಖನವು ಅತ್ಯಂತ ಮೆಚ್ಚುಗೆಗೆ ಪಾತ್ರವಾಗಿದೆ. ಕಾರಂತರ ಆ ಕಾದಂಬರಿ -ಯನ್ನು ನಾನು ಎಂದೂ ಓದಿದ್ದೆ. ಆದರೆ ಪ್ರೊ.ಮುತಾಲಿಕರು ಬರೆದಿರುವ ಅನೇಕ ವಿಷಯಗಳು ನನಗೆ ಹೊಳೆದೇ ಇರಲಿಲ್ಲ. ಬಹುಶಃ ಕಾರಂತರ ಕೃತಿಗಳೆಲ್ಲವೂ ಇಂಗ್ಲೀಷಿಗೆ ತರ್ಜುಮೆಯಾಗಿದ್ದಲ್ಲಿ ಅವರಿಗೆ ನಿಜಕ್ಕೂ ನೋಬೆಲ್ ಪಾರಿತೋಷಕ ಸಿಗುತ್ತಿತ್ತು. ದಿಲ್ಲಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ಧಾರವಾಡದಲ್ಲಿ ವರಕವಿ ಬೇಂದ್ರೆ ರಾಷ್ಟ್ರೀಯ ಸ್ಮಾರಕ ಪ್ರತಿಷ್ಠಾನದವರು ದಿಲ್ಲಿಯಲ್ಲಿ ಎರಡು ದಿನಗಳ ಸಂಗೋಷ್ಠಿಯನ್ನು ಮಾಡಲಿರುವ ಸುದ್ದಿಯು ನನಗೆ ಎಲ್ಲಿಲ್ಲದ ಸಂತೋಷವನ್ನು ಉಂಟು ಮಾಡಿದೆ. ವರಕವಿ ಬೇಂದ್ರೆಯವರು ಎಂದೋ ಕನ್ನಡದ ಹೊಸ್ತಿಲನ್ನು ದಾಟಿ ದಿಲ್ಲಿಗೆ ಹೋಗಬೇಕಿತ್ತು. ತಡವಾಗಿಯಾದರೂ ಇದೀಗ ಅವರ ಪುಣ್ಯಸ್ಮರಣೆಯನ್ನು ದಿಲ್ಲಿಯಲ್ಲಿ ಮಾಡುತ್ತಿರುವುದು ನನಗೆ ಸಂತೋಷವನ್ನುಂಟುಮಾಡಿದೆ.

ಡಾ.ಪುರುಷೋತ್ತಮ ಬಿಳಿಮಲೆಯವರ ವಿಮರ್ಶಾ ಗ್ರಂಥವು ಶಿವಮೊಗ್ಗೆಯಲ್ಲಿ ಬಿಡುಗಡೆಯಾಗುತ್ತಿರುವ ಸುದ್ದಿಯು ನನ್ನನ್ನು ಚಕಿತಗೊಳಿಸಿದೆ. ಗೌರವ ಅಧ್ಯಕ್ಷರ ಸ್ಥಿರ ಅಂಕಣವಾದ "ನಮ್ಮ ನಮ್ಮೊಳಗೆ" ತುಂಬಾ ಪ್ರಸ್ತುತವೆನಿಸಿತು. ಡಾ.ಅವನೀಂದ್ರ ನಾಥ ರಾವ್ ಅವರ "ಚುಟುಕು ಸಾಹಿತ್ಯ ಅಧ್ಯಯನ ಯೋಗ್ಯ" ಎಂಬ ಲೇಖನವು ತುಂಬಾ ಅಚ್ಚುಕಟ್ಟಾಗಿ ಬಂದಿದೆ. ಆದರೆ ದಿ.ಡ್ವಿ.ಜಿ.ಭಟ್ಟರು ಒಬ್ಬ ಖ್ಯಾತನಾಮ ಚುಟುಕು ಕವಿಯಾಗಿದ್ದರು, ಯಾಕೋ ಡಾ.ಅವನೀಂದ್ರನಾಥ ರಾವ್ ಅವರಿಗೆ ಈ ವಿಷಯ ತಿಳಿದಂತಿಲ್ಲ. ಒಟ್ಟಾರೆ ಈ ಸಂಚಿಕೆಯು ನಿಜಕ್ಕೂ ವಿಶೇಷ  ವಿಶಿಷ್ಟ ಸಂಚಿಕೆಯೆಂದು ನನಗನಿಸುತ್ತಿದೆ. ದೂರದ ದಿಲ್ಲಿಯಲ್ಲಿ ಕುಳಿತು ಇಂತಹ ಉತ್ತಮ ಗುಣಮಟ್ಟದ ಸಂಚಿಕೆಯನ್ನು ಹೊರತಂದುದಕ್ಕಾಗಿ ನಾನು ಸಂಘದ ಎಲ್ಲ ಪದಾಧಿಕಾರಿಗಳನ್ನು ಮನಸಾರೆ ಅಭಿನಂದಿಸುತ್ತಿದ್ದೇನೆ.

ಗೌರವ ವಂದನೆಗಳೊಂದಿಗೆ

ನಿಮ್ಮ ವಿಶ್ವಾಸಿ

ಎನ್.ಪಿ.ಭಟ್ಟ (IRS Retd)
ಗೌರವ ಸಂಚಾಲಕರು, ಪದ್ಮಶ್ರೀ ಡಾ.ಸುಧಾಮೂರ್ತಿ
ಇನಟ್ಯಾಕ ಸಾಂಸ್ಕೃತಿಕ ಪರಂಪರೆಯ ವಸ್ತುಸಂಗ್ರಹಾಲಯ,ಧಾರವಾಡ

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ.
ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Oct-2019, Vol. No.30, Issue No.1, Price Rs.1/-
RNI Regn. No. 53405/91, DL-SW-1/4016/19-21
Date of Publication : Oct 8th / 9th, Posting Date :10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y




ದಿನಾಂಕ 21.09.2019ರಂದು ನಡೆದ ಬೇಂದ್ರೆ ವಿಚಾರ ಸಂಕಿರಣದ ನಂತರ ನೃತ್ಯ ಪ್ರದರ್ಶಿಸಿದ ಅನನ್ಯಾ ನಾಗರಾಜ ಮತ್ತು ತಂಡ



ದಿನಾಂಕ : 21.09.2019ರಂದು ನಡೆದ ಬೇಂದ್ರೆ ವಿಚಾರ ಸಂಕಿರಣದ ನಂತರ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಉಡುಪಿಯ ಶಾರದಾ ರೆಸಿಡೆನ್ಸಿಯಲ್ ಸ್ಕೂಲ್ ವಿದ್ಯಾರ್ಥಿಗಳು ತಮ್ಮ ಪ್ರಾಂಶುಪಾಲರೊಂದಿಗೆ ಸಂಘದ ಅಭಿನಂದನೆ ಸ್ವೀಕರಿಸಿದ ಕ್ಷಣಗಳು